# ಹಂಪಿ ಟೈಮ್ಸ್
HAMPI TIMES

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

ಕನ್ನಡ ದಿನಪತ್ರಿಕೆ
KANNADA DAILY






ಸಂಪುಟ:02 • ಸಂಚಿಕೆ:12 • ನೋಂದಣಿ ನಂ.:KARKAN27911 • ವಿಜಯನಗರ • 04.07.2024 • ಗುರುವಾರ • ಪುಟ:04 • ಬೆಲೆ:2

Volume:02 • Issue:12 • Reg.No:KARKAN27911 • VIJAYANAGARA • 04.07.2024 • Thursday • Page:04 • Rs:2


ಮೈಕ್ರೋ ನ್ಯೂಸ್

## ಅಮೃತ ಸ್ವಾಭಿಮಾನಿ ಕುರಿಗಾಹಿ ಯೋಜನೆ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಕೊಪ್ಪಳ**

2024–25 ನೇ ಸಾಲಿನ ಅಮೃತ ಸ್ವಾಭಿಮಾನಿ ಕುರಿಗಾಹಿ ಯೋಜನೆಯಡಿ (20+1) ಮೂರು ವರ್ಷ ಪೂರೈಯಿಸಿದ ಕುರಿ ಮತ್ತು ಉಣ್ಣೆ ಉತ್ಪಾದಕರ ಸಹಕಾರ ಸಂಘಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಜುಲೈ 31 ಕೊನೆಯ ದಿನವಾಗಿದ್ದು, ಜುಲೈ 08 ರಿಂದ ಜು.31 ರವರೆಗೆ ಸಹಾಯಕ ನಿರ್ದೇಶಕರು, ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ನಿಯಮಿತ ಕೊಪ್ಪಳರವರ ಕಛೇರಿಯಿಂದ ನಿಗದಿತ ಅರ್ಜಿಗಳನ್ನು ಪಡೆದುಕೊಂಡು ಅರ್ಹ ದಾಖಲಾತಿಗಳೊಂದಿಗೆ ಜು.31 ರ ಸಂಜೆ 5 ಗಂಟೆ ಒಳಗಾಗಿ ಕಛೇರಿಗೆ ಸಲ್ಲಿಸಬೇಕು. ಈ ಯೋಜನೆಯ ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಅನುಷ್ಠಾನಾಧಿಕಾರಿಗಳು/ಸಹಾಯಕ ನಿರ್ದೇಶಕರು, ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ನಿಯಮಿತ, ಕೊಪ್ಪಳರವರನ್ನು ಸಂಪರ್ಕಿಸಬಹುದು ಎಂದು ತಿಳಿಸಿದೆ.

## ಸಿಎಂ ಪರಿಹಾರ ನಿಧಿಗೆ 10 ಕೋಟಿ ರೂ. ದೇಣಿಗೆ




**ಬೆಂಗಳೂರು:** ಕರ್ನಾಟಕ ರಾಜ್ಯ ಖನಿಜ ನಿಗಮದ ವತಿಯಿಂದ 1,09,07,48,050 ರೂ. ಲಾಭಾಂಶ ಹಾಗೂ ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ 10 ಕೋಟಿ ರೂ. ಗಳ ದೇಣಿಗೆಯ ಚೆಕ್‌ಗಳನ್ನು ನಿಗಮದ ಅಧ್ಯಕ್ಷ ಜಿ.ಎಸ್. ಪಾಟೀಲ ಅವರು ಸಿಎಂ ಸಿದ್ದರಾಮಯ್ಯ ಅವರಿಗೆ ಹಸ್ತಾಂತರಿಸಿದರು. ನಂತರ ಮುಖ್ಯಮಂತ್ರಿಯವರು ರೇಷ್ಮೆ ಮತ್ತು ಗಣಿ ಇಲಾಖೆಗೆ ಸಂಬಂಧಿಸಿದ ಸಭೆ ನಡೆಸಿದರು.

# ದಾಸ್ಯ ಕಳೆದಿದೆ, ಈಗಲಾದರೂ ಸೆಟೆದು ನಿಲ್ಲಿ

### ಶ್ರೀ ರಾಮಕೃಷ್ಣ ಗೀತಾಶ್ರಮದ ದಶಮಾನೋತ್ಸವದ ಯುವ ಸಮ್ಮೇಳನದಲ್ಲಿ ಸೂಲಿಬೆಲೆ ಯುವಶಕ್ತಿಗೆ ಕರೆ

### ಭಾರತೀಯರು ಸಿಂಹಗಳಂತಿದ್ದರೂ ಕುರಿಗಳಾಗಿ ಬದುಕುವುದು ತರವಲ್ಲ ಎಂದ ಸ್ವಾಮಿ ನಿರ್ಭಯಾನಂದಜಿ

**ಹಂಪಿ ಟೈಮ್ಸ್ ಹೊಸಪೇಟೆ**

ದೇಶಕ್ಕೆ ಸ್ವಾತಂತ್ರ್ಯ ಲಭಿಸಿ 75 ವರ್ಷಗಳಾದ ಬಳಿಕ ಹಲವು ವಿಷಯಗಳಲ್ಲಿ ದಾಸ್ಯ ಕಳೆದುಕೊಂಡ ನಿರಾಳ ಭಾವ ಮೂಡುತ್ತಿದೆ. ಯುವಜನತೆ ಈಗಲಾದರೂ ತಮ್ಮ ಜಡತ್ವವನ್ನು ಬದಿಗಿಟ್ಟು ಸೆಟೆದು ನಿಲ್ಲಬೇಕು ಎಂದು ವಾಗ್ಮಿ, ಅಂಕಣಕಾರ ಚಕ್ರವರ್ತಿ ಸೂಲಿಬೆಲೆ ಯುವಕರಿಗೆ ಕರೆ ನೀಡಿದರು.

ಇಲ್ಲಿನ ಶ್ರೀ ರಾಮಕೃಷ್ಣ ಗೀತಾಶ್ರಮದ ದಶಮಾನೋತ್ಸವ ಹಾಗೂ ಶ್ರೀ ರಾಮಕೃಷ್ಣ ವಿವೇಕಾನಂದ ಭಾವಪ್ರಚಾರ ಪರಿಷತ್ ಕರ್ನಾಟಕ ಅರ್ಧವಾರ್ಷಿಕ ಸಭೆಯ ಹಿನ್ನೆಲೆಯಲ್ಲಿ ನಗರದ ವಾಸವಿ ಕಲ್ಯಾಣ ಮಂಟಪದಲ್ಲಿ ಬುಧವಾರ ನಡೆದ ಯುವ ಸಮ್ಮೇಳನದಲ್ಲಿ ಮಾತನಾಡಿದರು. 'ದಾಸ್ಯದ ಪರಿಕಲ್ಪನೆ ದಕ್ಷಿಣ ಭಾರತೀಯರಾದ ನಮಗೆ ಅಷ್ಟಾಗಿ ಗೊತ್ತಾಗುವುದಿಲ್ಲ. ಉತ್ತರ ಭಾರತ, ಗಡಿ ಭಾಗಕ್ಕೆ ಹೋದಾಗ ನಾವು ಎಂತಹ ಸ್ಥಿತಿಯಲ್ಲಿದ್ದೆವು ಎಂಬುದ ತಿಳಿಯುತ್ತದೆ. ಇಂದು ಸಮರ್ಥ ನಾಯಕತ್ವ ದೇಶಕ್ಕೆ ಇರುವ ಕಾರಣಕ್ಕೆ ಶತ್ರುಗಳು ಸಹ ನಮ್ಮನ್ನು ಕಂಡು ಭಯಪಡುವ ಸ್ಥಿತಿ ಇದೆ. ಸ್ವಾಮಿ ವಿವೇಕಾನಂದರು ಹೇಳಿದಂತಹ ನಾಯಕತ್ವ ಗುಣ ನಿಜವಾಗಿ ಪ್ರದರ್ಶನಗೊಳ್ಳುತ್ತಿರುವುದು ಈಗ. ಈ ಹಂತದಲ್ಲೂ ನಮ್ಮ ಯುವಜನತೆ ತಮ್ಮ ಶಕ್ತಿಯನ್ನು ಒಟ್ಟುಗೂಡಿಸಿಕೊಂಡು ವಿವೇಕ ವಾಣಿಯಂತೆ ನಡೆಯುವ ಧೈರ್ಯ ತೋರಬೇಕು' ಎಂದು ಸಲಹೆ ನೀಡಿದರು.

**'ಕುರಿಗಳಾಗಬೇಡಿ, ಸಿಂಹಗಳಾಗಿ:** ಗದಗ–ವಿಜಯಪುರ ಶ್ರೀ ರಾಮಕೃಷ್ಣ–ವಿವೇಕಾನಂದ ಆಶ್ರಮದ ಅಧ್ಯಕ್ಷ ಸ್ವಾಮಿ ನಿರ್ಭಯಾನಂದಜಿ ಮಹಾರಾಜ್ ಮಾತನಾಡಿ, ಭಾರತೀಯರಾದ ನಾವೆಲ್ಲ ಸಿಂಹಗಳಾದರೂ ಕುರಿಗಳಂತೆ ಬದುಕಿದ್ದೇವೆ. ವಿವೇಕಾನಂದರು ತಮ್ಮ ಮಾತುಗಳ ರೂಪದಲ್ಲಿ ನಮ್ಮ ಜತೆಗಿದ್ದಾರೆ. ಇನ್ನು ಮೇಲಾದರೂ ನಾವು ಸಿಂಹಗಳೇ ಎಂಬುದನ್ನು ತೋರಿಸಬೇಕಾಗಿದೆ. 'ಭಾರತೀಯರ ರಕ್ತದಲ್ಲಿ ಬಹಳ ದೊಡ್ಡ ಶಕ್ತಿ ಇದೆ. ಅನಾಗರಿಕ ದೇಶದವರನ್ನೂ ನಾಗರಿಕರನ್ನಾಗಿ ಮಾಡಿದ್ದು ನಾವು. ಅದಕ್ಕೆ ಕಾರಣ ನಮ್ಮ ಸಂಸ್ಕೃತಿ, ಪರಂಪರೆ. ನಾವು ಬೆಳೆದ ರೀತಿ ಮತ್ತು ನಮಗೆ ಸಿಕ್ಕಿದಂತಹ ಸಂಸ್ಕಾರ. ಭಾರತೀಯರಲ್ಲಿ ಹರಿಯುತ್ತಿರುವ ಆರ್ಯರ ರಕ್ತದ ಶಕ್ತಿಯ ಬಗ್ಗೆ ವಿವೇಕಾನಂದರಿಗೆ ಬಹಳ ನಂಬಿಕೆ ಇತ್ತು, ಅದನ್ನು ಉಳಿಸುವ ಕೆಲಸ ಯುವ ಜನತೆಯಿಂದ ಆಗಬೇಕು. ಅದ್ಭುತವಾಗಿ ಬದುಕುವ ಟಾನಿಕ್ ನಮಗೆ ಕೊಡಬೇಕಿತ್ತು, ಆದರೆ ಅದನ್ನು ನಮಗೆ ಕೊಟ್ಟವರಿಲ್ಲ, ವಿವೇಕಾನಂದ ಅವರು ಈ ಕೆಲಸ ಮಾಡಿದರು. ವಿವೇಕಾನಂದರೇ ನಿಮಗೆ ಪ್ರೇರಣೆ ಆಗದಿದ್ದರೆ ಜಗತ್ತಿನಲ್ಲಿ ಬೇರೆ ಯಾರೂ ಪ್ರೇರಣೆ ಆಗಲು ಸಾಧ್ಯವಿಲ್ಲ, ವಿದ್ಯಾರ್ಥಿಗಳಿಗೆ ವಿವೇಕ ಸಂದೇಶ ತಲುಪುವ ಕೆಲಸವಾಗಬೇಕು ಎಂದು ತಿಳಿಸಿದರು.

ಹೈದಾರಾಬಾದ್ ಶ್ರೀ ರಾಮಕೃಷ್ಣ ಆಶ್ರಮದ ಅಧ್ಯಕ್ಷ ಸ್ವಾಮಿ ಬೋಧಮಯಾನಂದಜಿ ಮಹಾರಾಜ್ ಮಾತನಾಡಿ, ನಾನು ಸ್ವಾತಂತ್ರ್ಯ ತಂದುಕೊಟ್ಟರೆ ಅದನ್ನು ಉಳಿಸಿಕೊಳ್ಳುವವರು ಯಾರು ಎಂದು ವಿವೇಕಾನಂದರು ಕೇಳಿದ್ದರು. ಇನ್ನು 50 ವರ್ಷಗಳ ಬಳಿಕ ದೇಶಕ್ಕೆ ಸ್ವಾತಂತ್ರ್ಯ ಲಭಿಸಬಹುದು ಎಂದು 1900ರಲ್ಲೇ ವಿವೇಕಾನಂದರು ತಿಳಿಸಿದ್ದರು. ಅವರ ಮಾತು ನಿಜವಾಗಿದೆ. ನಾಯಕತ್ವ ಕೊರತೆ ಸ್ವಾತಂತ್ರ್ಯದ ಬಳಿಕವೂ ಕಾಡುತ್ತಲೇ ಇತ್ತು. ಅದರ ಸ್ಪಷ್ಟ ಚಿತ್ರಣ ಸಿಗಬೇಕಿದ್ದರೆ ನಾವು ಗಡಿ ಭಾಗಕ್ಕೆ ಹೋಗಬೇಕು' ಎಂದರು. 'ಬ್ರಿಟಿಷರು ಮಾಡಿದ ಅನ್ಯಾಯ ಒಂದೆರಡಲ್ಲ. ಬಂಗಾಳವನ್ನು ವಿಭಜಿಸಿದ್ದು ದೇಶಕ್ಕೆ ಎದುರಾದ ಮೊದಲ ದೊಡ್ಡ ಆಘಾತವಾಗಿತ್ತು. ಬಕಿಂಗ್‌ಹ್ಯಾಮ್ ಅರಮನೆಯ ಬಚ್ಚಲು ಮನೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿತ್ತು. ಅದರ ಫಲವಾಗಿ ಇಂದು ಬಾಂಗ್ಲಾದೇಶ ನಮ್ಮದಲ್ಲದೆ ಹೋಯಿತು. ಕೋಲ್ಕತ್ತದಿಂದ ತ್ರಿಪುರಾಕ್ಕೆ ಹೋಗಬೇಕಾದರೆ ನಾಲ್ಕು ದಿನ ರೈಲು ಪ್ರಯಾಣ ಮಾಡಬೇಕಿತ್ತು. ಇತ್ತೀಚೆಗಷ್ಟೇ ಬಾಂಗ್ಲಾ ಸರ್ಕಾರದೊಂದಿಗೆ ರೈಲು ಒಪ್ಪಂದ ಆಗಿರುವುದು ಐತಿಹಾಸಿಕ ನಿರ್ಧಾರ. 'ನಿಮ್ಮ ಆರೋಗ್ಯದ ಬಗ್ಗೆ ಕಾಳಜಿ ವಹಿಸಿ, ದಿನಕ್ಕೆ 30 ನಿಮಿಷ ಧ್ಯಾನ ಮಾಡಿ, ವಿವೇಕಾನಂದರ ಕುರಿತು ಓದಿ ಎಂದು ಅವರು ಯುವಜನತೆಗೆ ಸಲಹೆ ನೀಡಿದರು.

ಮೈಸೂರಿನ ಶ್ರೀ ರಾಮಕೃಷ್ಣ ಆಶ್ರಮದ ಅಧ್ಯಕ್ಷ ಸ್ವಾಮಿ ಮುಕ್ತಿದಾನಂದಜಿ ಮಹಾರಾಜ್ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಬೆಂಗಳೂರು ಹಲಸೂರಿನ ಶ್ರೀ ರಾಮಕೃಷ್ಣ ಮಠದ ಅಧ್ಯಕ್ಷ ಸ್ವಾಮಿ ಬೋಧಸ್ವರೂಪಾನಂದಜಿ ಮಹಾರಾಜ್, ದಾವಣಗೆರೆ ರಾಮಕೃಷ್ಣ ಮಿಶನ್ ಆಶ್ರಮದ ಅಧ್ಯಕ್ಷ ಸ್ವಾಮಿ ತ್ಯಾಗೀಶ್ವರಾನಂದಜಿ ಮಹಾರಾಜ್, ರಾಣೆಬೆನ್ನೂರಿನ ಶ್ರೀರ ರಾಮಕೃಷ್ಣ ಗೀತಾಶ್ರಮದ ಅಧ್ಯಕ್ಷ ಸ್ವಾಮಿ ಪ್ರಕಾಶನಂದಜಿ ಮಹಾರಾಜ್ ಉಪಸ್ಥಿತರಿದ್ದರು. ಹನುಮಂತಪ್ಪ ನಿರ್ವಹಿಸಿದರು.

**ಕಿಕ್ಕಿರಿದ ಯುವಪಡೆ:**

ವಾಸವಿ ಕಲ್ಯಾಣ ಮಂಟಪದಲ್ಲಿ ಹಲವು ಕಾಲೇಜುಗಳ ವಿದ್ಯಾರ್ಥಿಗಳು ಕಿಕ್ಕಿರಿದು ಸೇರಿದ್ದು, ಆಸನಗಳೆಲ್ಲ ಭರ್ತಿಯಾಗಿದ್ದಕ್ಕೆ ನೆಲದಲ್ಲೇ ಕುಳಿತು ಸ್ವಾಮೀಜಿಗಳು ಹಾಗೂ ಸೂಲಿಬೆಲೆ ಅವರ ಭಾಷಣವನ್ನು ಆಲಿಸಿದರು.



> ವಿವೇಕಾನಂದರು ಇಂದು ನಮ್ಮೊಂದಿಗಿಲ್ಲವಾದರೂ ಅವರ ಚಿಂತನೆಗಳು ಅವರ ಭಾಷಣ, ಪುಸ್ತಕಗಳ ರೂಪದಲ್ಲಿ ನಮ್ಮ ಮುಂದಿವೆ. ಅದರಿಂದ ಅದೆಷ್ಟೋ ಮಂದಿ ಪ್ರಭಾವಿತರಾಗಿ ತಮ್ಮ ಜೀವವನ್ನೇ ಬದಲಿಸಿಕೊಂಡಿದ್ದಾರೆ. ಒಬ್ಬ ವ್ಯಕ್ತಿ ತನ್ನ ನಂತರವೂ ಇಷ್ಟು ಅಗಾಧ ಪ್ರಮಾಣದಲ್ಲಿ ಜನರನ್ನು ಮೋಡಿ ಮಾಡುತ್ತಾರೆ ಎಂದರೆ ಅದು ವಿವೇಕಾನಂದರ ಶಕ್ತಿಯ ಸಂಕೇತ. ಯುವಜನತೆಯ ಮೇಲಿಟ್ಟಿದ್ದ ಅವರ ಅಪಾರ ನಂಬಿಕೆಯನ್ನು ಸಾಕಾರಗೊಳಿಸಬೇಕು.
>
> – **ಚಕ್ರವರ್ತಿ ಸೂಲಿಬೆಲೆ** ಅಂಕಣಕಾರ

> ಸ್ವಾಮಿ ವಿವೇಕಾನಂದರಿಗೆ ಯುವ ಸಮುದಾಯದ ಮೇಲೆ ಅಪಾರ ನಂಬಿಕೆ ಇತ್ತು. ಯುವಕರು ಅವರ ಆಶಯಗಳನ್ನು ಅರ್ಥ ಮಾಡಿಕೊಳ್ಳಬೇಕು. ಯುವಕರು ಶೈಕ್ಷಣಿಕ ಸವಾಲುಗಳನ್ನು ಎದುರಿಸುವಲ್ಲಿ ವಿವೇಕಾನಂದರ ಚಿಂತನೆ ನೆರವಿಗೆ ಬರುತ್ತದೆ. ಶೈಕ್ಷಣಿಕ ಸಾಧನೆ ಮಾತ್ರವಲ್ಲ, ಯುವಕರ ಆಂತರಿಕ ಶಕ್ತಿಯನ್ನು ಉತ್ತೇಜಿಸುವ ಕೆಲಸ ಆಗಬೇಕು.
>
> – **ಸ್ವಾಮಿ ಮುಕ್ತಿದಾನಂದಜಿ ಮಹಾರಾಜ್**
> ಮೈಸೂರಿನ ಶ್ರೀ ರಾಮಕೃಷ್ಣ ಆಶ್ರಮದ ಅಧ್ಯಕ್ಷರು

## ರಾಹುಲ್ ಗಾಂಧಿ ಪ್ರಬುದ್ಧರೇ ಅಲ್ಲ

ಹಿಂದೂ ಚಿಂತನೆ, ಭಾರತೀಯ ಚಿಂತನೆಯಲ್ಲಿ ರಾಹುಲ್ ಬೆಳೆದವರಲ್ಲ. ಹೀಗಾಗಿ ಸಂಸತ್‌ನಲ್ಲಿ ಅವರು ನೀಡಿರುವ ಹೇಳಿಕೆ ಬಾಲಿಶದಂತೆ ಕಾಣುತ್ತಿದೆ. ಪ್ರಧಾನಿ ನರೇಂದ್ರ ಮೋದಿ ಅವರು ಇದಕ್ಕೆ ಸರಿಯಾಗಿಯೇ ಉತ್ತರ ಕೊಟ್ಟಿದ್ದಾರೆ' ಎಂದು ಚಕ್ರವರ್ತಿ ಸೂಲಿಬೆಲೆ ಹೇಳಿದರು.

'ಜಗತ್ತಿನಲ್ಲಿ ಹಿಂಸೆಗೆ ಪ್ರಚೋದನೆ ನೀಡುತ್ತಿರುವವರು ಯಾರು ಎಂಬುದು ಎಲ್ಲರಿಗೂ ಗೊತ್ತಿದೆ. ಯುರೋಪ್‌ನಲ್ಲಿ ಇಂದು ಕಾಣಿಸುತ್ತಿರುವ ತೀವ್ರ ಬಲಪಂಥೀಯ ಹೋರಾಟವೇ ಇದಕ್ಕೊಂದು ಸಾಕ್ಷಿ. ಹೀಗಿದ್ದರೂ ವಿರೋಧ ಪಕ್ಷದ ನಾಯಕರಾಗಿ ರಾಹುಲ್ ಗಾಂಧಿ ಇಂತಹ ಹೇಳಿಕೆ ನೀಡುತ್ತಿರುವುದನ್ನು ಕಂಡಾಗ ಅವರಿನ್ನೂ ಪ್ರಬುದ್ಧರಾಗಿಲ್ಲ ಎಂಬುದನ್ನು ತೋರಿಸುತ್ತದೆ' ಎಂದು ಬುಧವಾರ ಮಾಧ್ಯಮದವರಿಗೆ ತಿಳಿಸಿದರು. ಭಾರತೀಯ ನ್ಯಾಯಸಂಹಿತೆ ಜಾರಿಗೆ ತಂದಿರುವ ಕಾರಣ ಸಾಕ್ಷ್ಯಗಳ ಪರಿಶೀಲನೆಗೆ ಯಾವುದು ಅಡ್ಡಿಯಾಗಿದ್ದವೋ ಅದನ್ನು ತೊಡದುಹಾಕುವ ಕೆಲಸ ಆಗಿದೆ. ಇಲ್ಲೂ ಕೆಲವೊಂದು ದೋಷಗಳಿದ್ದರೆ ಅದನ್ನು ತಿದ್ದುಪಡಿ ಮಾಡಿ ಸರಿಪಡಿಸುವುದು ಸಾಧ್ಯವಿದೆ. ಖೈದಿಗಳಿಗೆ ಹಾಕಿದ ಉಡುಪನ್ನು ಮಕ್ಕಳಿಗೆ ತೊಡಿಸಿ ಸಂಭ್ರಮಿಸುವುದು ಸರಿಯಲ್ಲ. ಇದರ ಬದಲಿಗೆ ಬಂಧಿತರು ದೋಷಮುಕ್ತರಾಗಿ ಹೊರಬರಲಿ ಎಂಬ ಪ್ರಾರ್ಥನೆ ಸಲ್ಲಿಸಿದರೆ ಅದರಲ್ಲಿ ಅರ್ಥವಿದೆ ಎಂದು ಹೇಳಿದರು.





## ಮೂರು ವರ್ಷ ಮೇಲ್ಪಟ್ಟ ಸಿಬ್ಬಂದಿ ವರ್ಗಾವಣೆಗೆ ತಾಲೂಕು ಕರವೇ ಆಗ್ರಹ



**ಹಂಪಿ ಟೈಮ್ಸ್ ಹೊಸಪೇಟೆ**

ನಗರದ ವಿವಿಧ ಸರ್ಕಾರಿ ಕಚೇರಿಗಳಲ್ಲಿ ಮೂರು ವರ್ಷ ಮೇಲ್ಪಟ್ಟು ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳನ್ನು ವರ್ಗಾವಣೆ ಮಾಡಬೇಕೆಂದು ಆಗ್ರಹಿಸಿ ಕರ್ನಾಟಕ ರಕ್ಷಣಾ ವೇದಿಕೆ ತಾಲೂಕು ಘಟಕದ ಪದಾಧಿಕಾರಿಗಳು ಶಾಸಕ ಎಚ್.ಆರ್.ಗವಿಯಪ್ಪಗೆ ಬುಧವಾರ ಮನವಿ ಸಲ್ಲಿಸಿ ಒತ್ತಾಯಿಸಿದರು.

ಕರವೇ ಜಿಲ್ಲಾಧ್ಯಕ್ಷ ತಾರಿಹಳ್ಳಿ ಹನುಮಂತಪ್ಪ ಮಾತನಾಡಿ, ಸರ್ಕಾರದ ವಿವಿಧ ಇಲಾಖೆಗಳಲ್ಲಿ ಮೂರು ವರ್ಷಕ್ಕೂ ಮೇಲ್ಪಟ್ಟು ಠಿಕಾಣಿ ಹೂಡಿರುವ ಸಿಬ್ಬಂದಿಗಳನ್ನು ಕೂಡಲೇ ವರ್ಗಾವಣೆಗೊಳಿಸಬೇಕು. ಅಭಿವೃದ್ಧಿ ಕನಸುಹೊತ್ತು ಬರುವ ಮೇಲಾಧಿಕಾರಿಗಳಿಗೆ ತಪ್ಪು ಮಾಹಿತಿ ನೀಡಿ ದಿಕ್ಕು ತಪ್ಪಿಸುತ್ತಿದ್ದಾರೆ. ವಿವಿಧ ಇಲಾಖೆಯಲ್ಲಿ ಲಂಚ ಕೊಡದೇ ಕೆಲಸಗಳಾಗುತ್ತಿಲ್ಲ. ಜನಸಾಮಾನ್ಯರು ಜೀವನ ನಡೆಸಲು ಹರಸಾಸಹ ಪಡುತ್ತಿದ್ದಾರೆ. ಕೇಸ್ ವರ್ಕರ್‌ಗಳಿಗೆ ಹಣಕೊಡದಿದ್ದರೆ ಕೆಲಸಬಿಟ್ಟು ಅಲೆದಾಡಬೇಕಾದ ಪರಿಸ್ಥಿತಿ ನಿರ್ಮಾಣವಾಗಿದ್ದು, ಇಲಾಖೆ ಸಿಬ್ಬಂದಿಗಳತ್ತ ಶಾಸಕರು ಕಣ್ಣಾಯಿಸಿ, ಆಡಳಿತ ವ್ಯವಸ್ಥೆಗೆ ಚುರುಕುಗೊಳಿಸಬೇಕು ಎಂದು ಆಗ್ರಹಿಸಿದರು. ಶಾಸಕರು ಪ್ರತಿಕ್ರಿಯಿಸಿ, ಸೂಕ್ತ ಕ್ರಮವಹಿಸಲಾಗುವುದು ಎಂದು ಭರವಸೆ ನೀಡಿದರು. ಈ ಸಂದರ್ಭದಲ್ಲಿ ವೇದಿಕೆಯ ಎನ್ ಹೆಚ್ ಶ್ರೀನಿವಾಸ., ಎಸ್ ಎಮ್ ಜಾಫರ್, ತಾರಿಹಳ್ಳಿ.ಜಂಬಣ್ಣ, ಅಂಬರೀಶ್, ಪ್ರಶಾಂತ, ಲಕ್ಷ್ಮಣ, ವಿರುಪಾಕ್ಷಿ., ಗುಜ್ಜಲ್ ಹುಲುಗಪ್ಪ. ಎಮ್.ಸುರೇಶ್, ರುದ್ರಪ್ಪ ಜೋಗಿ, ಬಷೀರ್, ಹೊನ್ನೂರವಲಿ ಇತರರಿದ್ದರು.



## ವಿಜ್ಞಾನ

# ಬಾಹ್ಯ ಗ್ರಹಗಳನ್ನು ಏಕೆ ಅನಿಲ ದೈತ್ಯ ಎಂದು ಕರೆಯಲಾಗುತ್ತದೆ?

■ ಆರ್.ಬಿ.ಗುರುಬಸವರಾಜ

ನಮ್ಮ ಸೌರವ್ಯೂಹದಲ್ಲಿ ಸದ್ಯಕ್ಕೆ ಎಂಟು ಗ್ರಹಗಳಿವೆ. ಕ್ಷುದ್ರಗ್ರಹ ಪಟ್ಟಿಯ ಈಚೆಗಿನ ಗ್ರಹಗಳನ್ನು ಆಂತರಿಕ ಗ್ರಹಗಳು ಎಂದು ಮತ್ತು ಕ್ಷುದ್ರಗ್ರಹಗಳ ಪಟ್ಟಿಯ ಆಚೆಗೆ ಇರುವ ಗ್ರಹಗಳನ್ನು ಬಾಹ್ಯ ಗ್ರಹಗಳೆಂದು ವಿಂಗಡಿಲಾಗಿದೆ. ಬುಧ, ಶುಕ್ರ, ಭೂಮಿ ಮತ್ತು ಮಂಗಳ ಇವು ನಾಲ್ಕು ಆಂತರಿಕ ಗ್ರಹಗಳಾಗಿವೆ ಮತ್ತು ಗುರು, ಶನಿ, ಯುರೇನಸ್ ಮತ್ತು ನೆಪ್ಚೂನ್‌ಗಳು ನಾಲ್ಕು ಬಾಹ್ಯ ಗ್ರಹಗಳಾಗಿವೆ. ಬಾಹ್ಯ ಗ್ರಹಗಳನ್ನು 'ಅನಿಲ ದೈತ್ಯರು' ಎಂಬ ಹೆಸರಿನಿಂದ ಕರೆಯಲಾಗುತ್ತದೆ.

ಬಾಹ್ಯ ಗ್ರಹಗಳನ್ನು ಅನಿಲ ದೈತ್ಯರೆಂದು ಕರೆಯಲು ಅನೇಕ ಕಾರಣಗಳಿವೆ. ಬಾಹ್ಯ ಗ್ರಹಗಳು ಅಲ್ಪ ಪ್ರಮಾಣದಲ್ಲಿ ಮಿಥೇನ್, ಅಮೋನಿಯಾ ಮತ್ತು ನೀರಿನ ಆವಿಯಂತಹ ಅನಿಲಗಳನ್ನು ಹಾಗೂ ಹೆಚ್ಚಿನ ಪ್ರಮಾಣದಲ್ಲಿ ಹೈಡ್ರೋಜನ್ ಮತ್ತು ಹೀಲಿಯಂನಂತಹ ಅನಿಲಗಳಿಂದ ಕೂಡಿವೆ.



ಅವುಗಳು ದಪ್ಪವಾದ ವಾತಾವರಣವನ್ನು ಹೊಂದಿವೆ. ಅವು ಆಂತರಿಕ ಗ್ರಹಗಳಿಗಿಂತ ಗಾತ್ರದಲ್ಲಿ ದೊಡ್ಡದಾಗಿದ್ದು, ಅನೇಕ ನೈಸರ್ಗಿಕ ಉಪಗ್ರಹಗಳನ್ನು ಮತ್ತು ಉಂಗುರಗಳನ್ನು ಹೊಂದಿವೆ. ಅನಿಲ ದೈತ್ಯರು ಯಾವುದೇ ಘನ ಮೇಲ್ಮೈಯನ್ನು ಹೊಂದಿಲ್ಲ.

ಆಂತರಿಕ ಗ್ರಹಗಳಿಗೆ ಹೋಲಿಸಿದರೆ ಬಾಹ್ಯ ಗ್ರಹಗಳು ಕಡಿಮೆ ತಾಪಮಾನ ಮತ್ತು ಕಡಿಮೆ ಒತ್ತಡವನ್ನು ಹೊಂದಿವೆ. ಈ ಪರಿಸ್ಥಿತಿಗಳು ಹೈಡ್ರೋಜನ್ ಮತ್ತು ಹೀಲಿಯಂನಂತಹ ಹಗುರವಾದ ಅನಿಲಗಳ ರಚನೆಗೆ ಅವಕಾಶ ಮಾಡಿಕೊಡುತ್ತದೆ. ಪರಿಣಾಮವಾಗಿ ಹಗುರವಾದ ಅನಿಲಗಳಿಂದ ರೂಪುಗೊಂಡ ಬಾಹ್ಯ ಗ್ರಹಗಳು ದಪ್ಪವಾದ ವಾತಾವರಣವನ್ನು ಹೊಂದಿವೆ.

ಅನಿಲ ದೈತ್ಯಗಳು ಘನ ತಿರುಳನ್ನು ಹೊಂದಿದ್ದರೂ, ಗ್ರಹಗಳ ಒಟ್ಟಾರೆ ಗಾತ್ರಕ್ಕೆ ಹೋಲಿಸಿದರೆ ಇವುಗಳು ತುಲನಾತ್ಮಕವಾಗಿ ಚಿಕ್ಕದಾಗಿದೆ. ಅನಿಲ ದೈತ್ಯಗಳು ಶನಿಯಂತೆಯೇ ಉಂಗುರಗಳ ಗುಂಪನ್ನು ಹೊಂದಿವೆ. ಅನಿಲ ದೈತ್ಯರು ಶಕ್ತಿಯುತವಾದ ಗುರುತ್ವಾಕರ್ಷಣೆಯನ್ನು ಹೊಂದಿದ್ದು ಅದು ತಮ್ಮ ಒಳಾಂಗಣದಲ್ಲಿ ಅನಿಲವನ್ನು ಸಂಕುಚಿತಗೊಳಿಸುತ್ತದೆ. ಅನಿಲದೈತ್ಯ ಗ್ರಹಗಳು ಕೆಲವು ವೇಳೆ ಹೆಚ್ಚಿನ ಒತ್ತಡಗಳು ಮತ್ತು ತಾಪಮಾನಗಳನ್ನು ಸೃಷ್ಟಿಸುತ್ತದೆ. ಈ ಪರಿಸ್ಥಿತಿಗಳಲ್ಲಿ ಅನಿಲವು ದ್ರವ ಅಥವಾ ಕೆಲವು ಸಂದರ್ಭಗಳಲ್ಲಿ ಘನವಸ್ತುವಿನಂತೆ ವರ್ತಿಸುವಂತೆ ಮಾಡುತ್ತದೆ. ಲೋಹೀಯ ಹೈಡ್ರೋಜನ್‌ನಂತಹ ವಸ್ತುವಿನ ವಿಲಕ್ಷಣ ಸ್ಥಿತಿಗಳನ್ನು ಸೃಷ್ಟಿಸುತ್ತದೆ. ಅನಿಲ ದೈತ್ಯರು ಆಕರ್ಷಕ ಗ್ರಹಗಳಾಗಿದ್ದು, ವಿಜ್ಞಾನಿಗಳು ಮತ್ತು ಬಾಹ್ಯಾಕಾಶ ಉತ್ಸಾಹಿಗಳಿಗೆ ಹೊಸ ರಹಸ್ಯಗಳು ಮತ್ತು ಅದ್ಭುತ ಮಾಹಿತಿಗಳನ್ನು ಬಹಿರಂಗಪಡಿಸುತ್ತಲೇ ಇವೆ.


## ಮಕ್ಕಳು ಅರಸರಾಗಬೇಕೆ?

ಓದಲು ಸಮಯವಿಲ್ಲವೆಂದು ಪತ್ರಿಕೆಯನ್ನು ಕೈ ಬಿಡಬಾರದು, ಕನ್ನಡ ಪತ್ರಿಕೆಯೊಂದು ಕೈಯಲ್ಲಿಡಿದರೆ, ಹಿರಿಯರನ್ನು ಅನುಸರಿಸುವ ಮಕ್ಕಳು ಮೊಬೈಲ್ ಬಿಟ್ಟು ಅಕ್ಷರ ದಾಸರಾಗುತ್ತಾರೆ. ಅಕ್ಷರ ದಾಸರಾದರೆ ಅರಸರು ಆಗಬಲ್ಲರಲ್ಲವೇ ?


## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.


**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.** ಇ-ಮೇಲ್:hampitimes@gmail.com

M: 94486 33038



## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

– ಜಾಹೀರಾತು ವ್ಯವಸ್ಥಾಪಕರು.


# ಚಪ್ಪರದ ಕಂಬ




ಸ್ನೇಹಿತ ವಿಠಲ ಭಂಡಾರಿ ತೀರಿಕೊಂಡ ವಾರ್ತೆ ಸಿಡಿಲಿನಂತೆ ಬಡಿಯಿತು. ನನ್ನ ಸಂಗ್ರಹದಲ್ಲಿರುವ ಅವರ ಚಿತ್ರಪಟ ಹುಡುಕಿದೆ. ಅವುಗಳಲ್ಲಿ ಒಂದು ಚಿಂತಕರ ಹತ್ಯೆಯನ್ನು ವಿರೋಧಿಸಿ ನಡೆದ ಚಳುವಳಿಯಲ್ಲಿ ಭಾಗವಹಿಸಲು ಹೋಗಿದ್ದಾಗ ಮಡಗಾಂದಲ್ಲಿ ತೆಗೆದಿದ್ದು. ಕರ್ನಾಟಕದಿಂದ ಹೋಗಿದ್ದ ನಾವೆಲ್ಲ ಬೆಳಗಿನ

ತಿಂಡಿಯನ್ನು ತಟ್ಟೆಯಲ್ಲಿ ಹಾಕಿಕೊಂಡು, ರೌಂಡಾಗಿ ನಿಂತು ಮಾತುಕತೆ ಮಾಡುತ್ತಿರುವ ಸನ್ನಿವೇಶವದು. ವೃತ್ತದ ಮಧ್ಯಬಿಂದುವಿನಲ್ಲಿ ನಿಂತು, ನೀಲಾಗಸದ ಶರಟನ್ನೂ ಕರಿಪ್ಯಾಂಟನ್ನೂ ಉಟ್ಟಿರುವ ವಿಠಲ್, ಕ್ಯಾಮೆರಾ ಹಿಡಿದು ಚಿತ್ರ ತೆಗೆಯುತ್ತಿದ್ದಾರೆ. ಮುಖ ಕಾಣುತ್ತಿಲ್ಲ. ಹಿಂದಿನಿಂದ ಆಜಾನುಬಾಹುವಾಗಿದ್ದ ನೀಳಬೆನ್ನು ಕಾಣುತ್ತಿದೆ. ಈ ಪಟವು, ಕಾಲುಶತಮಾನ ಅವರು ಚಳುವಳಿಯಲ್ಲಿ ಮಾಡಿದ ಕೆಲಸದ ಪರಿಯನ್ನು ಸೂಚಿಸುವ ರೂಪಕದಂತಿತ್ತು. ಅವರೆಂದೂ ಕ್ಯಾಮೆರಾದ ಮುಂದೆ ಅಥವಾ ವೇದಿಕೆಯ ಮೇಲೆ ಹೆಚ್ಚು ಕಾಣಿಸುತ್ತಿರಲಿಲ್ಲ. ಕ್ಯಾಮೆರಾದ ಹಿಂದೆ ವೇದಿಕೆಯ ಕೆಳಗೆ ನಿಂತು, ಉಳಿದವರ ಮುಖವನ್ನು ಸಭೆಗೆ ಒಡ್ಡುತ್ತಿದ್ದರು. ಮಲೆನಾಡ ಅಡಿಕೆ ತೋಟಗಳಲ್ಲಿ ನೀರನ್ನು ಒಂದು ಕಡೆಯಿಂದ ಇನ್ನೊಂದೆಡೆ ಹಾಯಿಸುವ ಅಜ್ಞಾತ ಸಂಕದಂತೆ ಕೆಲಸ ಮಾಡುತ್ತಿದ್ದರು. ತಿಳಿವುಳ್ಳವರ ಮತ್ತು ತಿಳಿವಿನ ಜರೂರತ್ತಿರುವ ಎರಡು ಸಮಾನಮನಸ್ಕ ಲೋಕಗಳನ್ನು ಕೂಡಿಸುವ ಕೊಂಡಿಯಾಗಲು ಬಯಸುತ್ತಿದ್ದರು. ವೇದಿಕೆಗೆ ಕಂಬವೂ ಚಪ್ಪರವೂ ಆಗುತ್ತಿದ್ದರು.

ಕೋವಿಡ್ ಅಲೆಯಲ್ಲಿ ಎಚ್.ಎಸ್. ದೊರೆಸ್ವಾಮಿ ಅವರಂತಹ ಹಿರಿಯರಿಂದ ಹಿಡಿದು ವಿಠಲ್ ತರಹದ ಯುವಕರ ತನಕ, ಸಮಾಜದ ಒಳಿತಿಗಾಗಿ ದುಡಿವ ಅನೇಕ ರಾಜಕೀಯ- ಸಾಮಾಜಿಕ ಕಾರ್ಯಕರ್ತರನ್ನು ಕಳೆದುಕೊಂಡೆವು. ಇವುಗಳಲ್ಲೆಲ್ಲ ವಿಠಲ್ ತಲೆಮಾರಿನವರ ಸಾವು ಹೆಚ್ಚು ದುಬಾರಿ. ಯಾಕೆಂದರೆ ಇವರಿನ್ನೂ ಹಲವು ದಶಕಗಳ ಕಾಲ ಸಮಾಜವನ್ನು ಹದುಳದಾಯಕವಾಗಿ ಬದಲಿಸುವ ಯುದ್ಧದಲ್ಲಿ ಸೈನಿಕರಾಗಬೇಕಾಗಿದ್ದವರು. ಸಾಹಿತ್ಯದ ಅಧ್ಯಾಪಕರಾಗಿದ್ದ ನಾವು ವಿಚಾರಗೋಷ್ಠಿ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಆಗಾಗ್ಗೆ ಕೂಡುತ್ತಿದ್ದೆವು. ಅಧ್ಯಾಪನ, ಪಠ್ಯಕ್ರಮ, ಸಾಹಿತ್ಯ ಮತ್ತು ಸಂಶೋಧನ ಕ್ಷೇತ್ರದ ವಿಷಯಗಳನ್ನು ಚರ್ಚಿಸುತ್ತಿದ್ದೆವು. ಪ್ರೀತಿಪಾತ್ರರಾದ ಕೆಲವರನ್ನು ಕಂಡಾಗ ಕಾಲೆಳೆಯಬೇಕು ಅನಿಸುತ್ತದೆ. ಈ ಸರಸ ಸಂಬಂಧ ವಿಠಲ್-ಯಮುನಾ ದಂಪತಿಗಳ ಜತೆ ಮಾತ್ರವಲ್ಲದೆ, ಆರ್.ವಿ. ಭಂಡಾರಿಯವರ ಜತೆಗೂ ನನಗಿತ್ತು.



ರಹಮತ್ ತರೀಕೆರೆ
ಲೇಖಕರು, ಸಂಸ್ಕೃತಿ ಚಿಂತಕರು

Hampi Times E-paper
SCAN AND READ

ನನ್ನ ಈ ಚಾಳಿಯಿಂದ ದಿ. ಎಸ್.ಎಸ್. ಹಿರೇಮಠ ಅವರು, 'ನೀವು ಗಂಭೀರ ತಾತ್ವಿಕ ಚರ್ಚೆಯನ್ನು ತಪ್ಪಿಸಿಕೊಳ್ಳಲೆಂದೇ ನಗೆ ಚಾಟಿಕೆ ಮಾಡುತ್ತೀರಿ' ಎಂದು ಆಕ್ಷೇಪಿಸುತ್ತಿದ್ದರು. ಸದಾ ಅತಿಗಂಭೀರ ಮುಖಮುದ್ರೆಯಲ್ಲಿ ಇರುವುದು, ನಮ್ಮ ಚಟುವಟಿಕೆಯ ಜೀವಂತಿಕೆ ಕಸಿಯಬಹುದು ಎಂದು ನನಗೆ ಶಂಕೆ. ಮೇಲ್ನೋಟಕ್ಕೆ ಗಂಭೀರವಾಗಿ ಕಾಣುತ್ತಿದ್ದ ವಿಠಲ್‌ಗೆ ಒಳ್ಳೇ ಹಾಸ್ಯಪ್ರವೃತ್ತಿಯಿತ್ತು. ಇದು ಅವರಿಗೆ ಯಕ್ಷಗಾನ ಸಂಸ್ಕೃತಿಯಿಂದಲೂ ಬಂದಿದ್ದಿರಬಹುದು. ಅವರು ಬಿಗಿಮುಖದ ಕಾಮ್ರೇಡ್ ಆಗಿರಲಿಲ್ಲ. ಹೊಳೆ ಕಡಲು ಕಾಡುಸುತ್ತಾಟ ನಾಟಕ ಸಿನಿಮಾಗಳಲ್ಲಿ ತನ್ಮಯವಾಗಬಲ್ಲ ಸೌಂದರ್ಯೋಪಾಸಕ ಗುಣ

ಅವರಲ್ಲಿತ್ತು. ಅವರು ಕೆಳದುಟಿಯನ್ನು ತುಸು ಓರೆಮಾಡಿ ಹಾಸ್ಯ ಪ್ರಸಂಗಗಳನ್ನು ನಿರೂಪಿಸುತ್ತಿದ್ದ ಮುಖಚಹರೆ ಈಗಲೂ ಕಣ್ಣಮುಂದಿದೆ. ವಿಠಲ್ ಬೇಂದ್ರೆ ಹೇಳುವಂತೆ "ಹುಟ್ಟಾಯಾಂವ ನಗೀ ಕ್ಯಾದಗಿ ಮುಡಿದು' ಬಂದಿದ್ದರು.

ನನಗೆ ವಿಠಲ್ ಅವರಿಗಿಂತ ಅವರ ತಂದೆ ಆರ್.ವಿ. ಭಂಡಾರಿಯವರ ಜತೆ ಹೆಚ್ಚು ನಿಕಟವಾದ ಸಂಬಂಧವಿತ್ತು. ಅವರು, ಉದಯೋನ್ಮುಖನಾಗಿ ನಾನು ಬರೆಯುತ್ತಿದ್ದ ಹಸಿಬಿಸಿ ಬರೆಹವನ್ನೆಲ್ಲ ಶಿಕ್ಷಕ ಶ್ರದ್ಧೆಯಿಂದ ಓದಿ, ತಪ್ಪಿದಲ್ಲಿ ತಿದ್ದಿ, ಶಹಬಾಸಗಿರಿ ಕೊಡುತ್ತ ಬೆಳೆಸಿದವರು. ನಮ್ಮಿರ್ವರ ಸಂಬಂಧ ಏರ್ಪಟ್ಟಿದ್ದು ಬಂಡಾಯ ಸಂಘಟನೆಯ ಕಾರ್ಯಕ್ರಮಗಳಲ್ಲಿ. ಅವರೂ ಕವಿ ಜಿ.ಎಸ್. ಅವಧಾನಿಯವರೂ ಒಂದೇ ಬಸ್ಸಿನಲ್ಲಿ ಪಯಣಿಸಿ ಕಾರ್ಯಕ್ರಮಕ್ಕೆ ಅಶ್ವಿನಿ ಸೋದರರಂತೆ ಅವತರಿಸುತ್ತಿದ್ದರು. ನಾವೆಲ್ಲ ಒಂದು ಛತ್ರದಲ್ಲಿ ಉಳಿದುಕೊಳ್ಳುತ್ತಿದ್ದೆವು. ಯಾರಾದರೂ ನನಗೆ ಹಲ್ಲುಜ್ಜಲು ಪೇಸ್ಟ್ ಕೇಳಿದರೆ ಕೊಡುತ್ತ, 'ನಿಮಗೆ ಸ್ನೋಪೌಡರ್ ಬೇಕಿದ್ದಲ್ಲಿ ಆರ್.ವಿ.ಯವರನ್ನು ಕಾಣಿ' ಎಂದು ಕುಮ್ಮಕ್ಕು ಕೊಡುತ್ತಿದ್ದೆ. ಆರ್.ವಿ.ಯವರನ್ನು ಕಾಣಲು ನಾನು ಬಾನು ಕೆರೆಕೋಣಕ್ಕೆ

ಹೋಗುತ್ತಿದ್ದೆವು. ಅವರ ಪುಟ್ಟ ಮನೆಯಲ್ಲಿ ಉಳಿಯುತ್ತಿದ್ದೆವು; ಮೀನುಸಾರು- ಕುಚ್ಚಲಕ್ಕಿ ಅನ್ನ ಸವಿಯುತ್ತಿದ್ದೆವು. ವಿಠಲ್ ನಮ್ಮನ್ನು ಕೆರೆಕಾನಮ್ಮನ ಗುಡ್ಡಕ್ಕೂ ಹೊನ್ನಾವರದ ಕಾಸರಕೋಡಿನ ಬೀಚಿಗೂ ಕರೆದುಕೊಂಡು ಹೋಗುತ್ತಿದ್ದರು. ನನಗೆ ಸಿಪಿಎಂನ ರಾಜಕೀಯ ನಿಲುವು ಮತ್ತು ಕಾರ್ಯಕ್ರಮಗಳ ಬಗ್ಗೆ ತಾತ್ವಿಕ ಭಿನ್ನಮತಗಳಿವೆ. ಆದರೆ ಪಕ್ಷದಲ್ಲಿರುವ ಆರ್.ಕೆ. ಹುಡಗಿ, ಕೆ. ನೀಲಾ, ಮೀನಾಕ್ಷಿ ಬಾಳಿ, ಮುನೀರ್ ಕಾಟಿಪಳ್ಳ, ಗುರುಶಾಂತ್, ವಿಠಲ್, ಯಮುನಾ ಮುಂತಾದ ನೂರಾರು ಸಂಗಾತಿಗಳು ನನಗೆ ಆತ್ಮೀಯರು. ಕುಟುಂಬ ಸ್ನೇಹಿತರು ಕೂಡ. ಇವರ ಜತೆ ಅರ್ಥಪೂರ್ಣ ಕ್ಷಣಗಳನ್ನು ಕಳೆದಿರುವೆ. ನಾಡನ್ನು ಸುತ್ತಿರುವೆ. ಉತ್ತರ ಕನ್ನಡಕ್ಕೆ ಸಂಶೋಧನ ಹುಡುಕಾಟಕ್ಕೆಂದು ಹೋದಾಗಲೆಲ್ಲ ಸಹನಶೀಲ ವಿಠಲ ಹಾಗೂ ಯಮುನಾರ ಸಹಾಯಹಸ್ತ ನನ್ನನ್ನು ಕೈಹಿಡಿಯುತ್ತಿತ್ತು. ಶಾಕ್ತಪಂಥದ ಅಧ್ಯಯನಕ್ಕೆ ಶಿರಸಿಯ ಮಾರಿ ಜಾತ್ರೆಗೆ ಹೋದಾಗ ವಿಠಲ್ ಎರಡೂ ದಿನ ನನ್ನ ಜತೆಗಿದ್ದರು. ಅವರ ಸ್ನೇಹಿತರಾದ ದೇವಿಯ ಪೂಜಾರಿ ಜತೆ ಚರ್ಚೆ ಮಾಡುವುದಕ್ಕೆ ಆಸ್ಪದ ಕಲ್ಪಿಸಿದರು. ಎರಡೂ ದಿನ ಸೋದರಿ ಮಾಧವಿಯವರ ಆತಿಥ್ಯವನ್ನು ಸವಿದೆ. ಆರ್.ವಿ.ಯವರ ನೆನಪಿನಲ್ಲಿ ಆರಂಭವಾದ

'ಸಹಯಾನ'ದ ಮೊದಲ ಸಮ್ಮೇಳನದಲ್ಲಿ ಅತಿಥಿಯಾಗಿ ಹೋದಾಗ ಕುಡಿದ ಅಪ್ಪೆಹುಳಿ, ಇವತ್ತೂ ನಶೆಯ ನೆನಪಾಗಿ ಉಳಿದುಕೊಂಡಿದೆ. ನನ್ನ ವೈಚಾರಿಕ ಯಾನದಲ್ಲಿ ಮತ್ತು ವೈಯಕ್ತಿಕ ಸುಖಸಂತೋಷದಲ್ಲಿ ಪಾಲುಗೊಳ್ಳುವ ಕರ್ನಾಟಕದ ಕುಟುಂಬಗಳಲ್ಲಿ ಕೆರೆಕೋಣದ ಭಂಡಾರಿಯವರ ಕುಟುಂಬವೂ ಒಂದು. ಮಾಧವಿ-ವಿಠಲರ ಸಹೋದರತ್ವ ಅಪೂರ್ವವಾದುದು.

ವಿಠಲ್ ವರ್ಗ ಜಾತಿ ಲಿಂಗ ಧರ್ಮ ಎಂಬ ನಾಲ್ಕು ಕಾಯಿಲೆಗಳ ವಿರುದ್ಧ ಪಕ್ಷದ ಚೌಕಟ್ಟಿನಲ್ಲಿ ರೂಪಿತವಾದ ಕಾರ್ಯಕ್ರಮಗಳಲ್ಲಿ ಸದಾ ತೊಡಗಿರುತ್ತಿದ್ದರು. ಬಡವರಾದ ಬುಡಕಟ್ಟು ಜನರೂ, ಆಳವಾಗಿ ಬೇರುಬಿಟ್ಟ ಕೋಮುವಾದವೂ, ಜನಬದುಕನ್ನು ವ್ಯಸ್ತಗೊಳಿಸುವ ನೌಕಾನೆಲೆ-ಗಣಿಗಾರಿಕೆಯಂತಹ

ಚಟುವಟಿಕೆಗಳಿಂದಲೂ ಕಂಗೆಟ್ಟ ಉತ್ತರ ಕನ್ನಡ ಜಿಲ್ಲೆ, ಅವರ ಕಾರ್ಯಕ್ಷೇತ್ರವಾಗಿತ್ತು. ಈಗ ಮತೀಯವಾದಿ ರಾಜಕಾರಣದ ನೆಲೆಮನೆಯಾಗಿರುವ ಅದು, ಬ್ರಿಟಿಶರ ಕಾಲಕ್ಕೆ ಸ್ವಾತಂತ್ರ್ಯ ಚಳುವಳಿಯ ಭೂಮಿಕೆಯಾಗಿತ್ತು. ಗೌರೀಶ ಕಾಯ್ಕಿಣಿ, ದಿನಕರ ದೇಸಾಯಿ, ಪಿಕಳೆ ಮಾಸ್ತರ ಕರ್ಮಭೂಮಿಯಾಗಿತ್ತು. ಉಜ್ವಲವಾದ ಚರಿತ್ರೆ ಮತ್ತು ವಿಷಾದಕರ ವರ್ತಮಾನವುಳ್ಳ ಇಂತಹ ಪ್ರದೇಶದಲ್ಲಿ, ಜನರ ಬದುಕು ನಾಳೆ ಹಸನಾಗುವುದು ಎಂಬ ಕನಸು ಕಟ್ಟಿಕೊಂಡು ವಿಠಲ್- ಯಮುನಾ ದುಡಿಯುತ್ತಿದ್ದರು. ಭಾರತದಲ್ಲಿ ಎಡಪಕ್ಷಗಳು ಚುನಾವಣ ಹಿನ್ನಡೆ ಅನುಭವಿಸುತ್ತಿರುವ ಬಿಕ್ಕಟ್ಟಿನ ಕಾಲಘಟ್ಟದಲ್ಲಿ ಭರವಸೆ ಕಳೆದುಕೊಳ್ಳದೆ ಕೆಲಸ ಮಾಡುತ್ತಿದ್ದರು. ತಮ್ಮ ಹೋರಾಟಗಳಿಗೆ ಪೂರಕವಾಗಿ ಸಾಹಿತ್ಯ ರಂಗಭೂಮಿ ಹಾಡಿಕೆಯಂತಹ ಕಲೆಗಳ ಮೂಲಕ ಸಂವೇದನೆ ರೂಪಿಸುವ ಕೆಲಸವನ್ನು ಹಮ್ಮಿಕೊಳ್ಳುತ್ತಿದ್ದರು. ಕನ್ನಡ ಸಾಹಿತ್ಯದ

ವಿದ್ಯಾರ್ಥಿಯಾಗುವುದು ಎಂದರೆ, ರಾಜಕೀಯ ಪ್ರಜ್ಞೆಯನ್ನು ಪಡೆಯುವ ಕ್ರಿಯೆಯೇ ಆಗಿರುವುದನ್ನು ಅವರು ಬಲ್ಲವರು. ಹೀಗಾಗಿ ಕಾಲೇಜಿನ ಸಾಂಸ್ಥಿಕ ಚೌಕಟ್ಟಿನಲ್ಲೂ ಅಧ್ಯಾಪಕರಾಗಿ ವಿದ್ಯಾರ್ಥಿಗಳನ್ನು ರೂಪಿಸುತ್ತಿದ್ದರು. ಅವರಿಗೆ

ತಾವು ಹುಟ್ಟಿಬೆಳೆದ ಜಿಲ್ಲೆಯ ಬಗ್ಗೆ ಅತೀವ ಸೆಳೆತವಿತ್ತು. ಕೆರೆಕೋಣದಂತಹ ಸಣ್ಣ ಊರಲ್ಲಿ ದೊಡ್ಡ ಕಾರ್ಯಕ್ರಮ ಹಮ್ಮಿಕೊಂಡು, ಅದನ್ನೊಂದು ಸಾಂಸ್ಕೃತಿಕ

ಕೇಂದ್ರವಾಗಿ ರೂಪಿಸುತ್ತಿದ್ದರು. ಚಳುವಳಿ, ಸಾಂಸ್ಕೃತಿಕ ಚಟುವಟಿಕೆ ಮತ್ತು ಕಲಿಕೆಗಳಿಗೆ ನಾಡಿನ ಕಲಾವಿದರನ್ನು ಚಿಂತಕರನ್ನು ಕರೆಯಿಸುತ್ತಿದ್ದರು. ಹೀಗಾಗಿ ಅವರ ಅಕಾಲಿಕ ಸಾವಿಗೆ ನಾಡಿನ ಮೂಲೆಮೂಲೆಗಳ ಯುವಕ-ಯುವತಿಯರು

ಮಿಡಿದದ್ದು ಸೋಜಿಗವಲ್ಲ. ವಿಠಲ್ ಹಲವು ಸ್ತರದ ತಲೆಮಾರುಗಳನ್ನು ಒಟ್ಟುಗೂಡಿಸುವ ಸಾಂಸ್ಕೃತಿಕ ಸೇರೆಗಾರರೂ ಆಗಿದ್ದರು.

ನಾನು ಬಾನು, ವರ್ಷಂಪ್ರತಿ ಕಡಲಕರೆಗೆ ಹೋದಾಗಲೆಲ್ಲ ವಿಠಲ್- ಯಮುನಾರನ್ನು ಸಾಮಾನ್ಯವಾಗಿ ಭೇಟಿ ಮಾಡುತ್ತಿದ್ದೆವು. ಸಿದ್ದಾಪುರದಲ್ಲಿದ್ದ ವಿಠಲ್ ಅವರಿಗಿಂತಲೂ ಕಾರವಾರದಲ್ಲಿದ್ದ ಯಮುನಾ ಹೆಚ್ಚು ಒದಗುತ್ತಿದ್ದರು. ಅವರು ನಮಗೆ ಮೀನೂಟದ ಅತ್ಯುತ್ತಮ ಹೋಟೆಲುಗಳನ್ನು ಪರಿಚಯಿಸಿದರು.

ಸಪತ್ನೀಕನಾಗಿ ಪ್ರವಾಸ ಹೋಗುತ್ತಿದ್ದ ನಾನು, ಚಳುವಳಿ ಕೆಲಸಕ್ಕಾಗಿ

ಅಗಲಿರುತ್ತಿದ್ದ, ಖಾಸಗಿ ಬದುಕು ಇಲ್ಲವೆಂಬಂತೆ ಯಾವುದಾದರೊಂದು ಕಾರ್ಯಕ್ರಮದಲ್ಲಿ ತೊಡಗಿರುತ್ತಿದ್ದ, ಯಮುನಾ-ವಿಠಲರ ದಾಂಪತ್ಯ ಕಂಡು ತಪ್ಪಿತಸ್ಥ ಭಾವ ಅನುಭವಿಸುತ್ತಿದ್ದೆ. ನಮ್ಮ ಮೀನೂಟಕ್ಕೆ ವಿಠಲ್ ಅವರನ್ನೂ ಕರೆಸಿಕೊಳ್ಳುತ್ತಿದ್ದೆವು. ಆಗ 'ಅಗಲಿರುವ ನಿಮ್ಮನ್ನು ನಾವು ಒಗ್ಗೂಡಿಸಿದ್ದೇವೆ' ಎಂದು ಛೇಡಿಸುತ್ತಿದ್ದೆವು. ಆಗ 'ಇಲ್ಲಪ್ಪಾ. ನೀವು ತಿಳಿದ ಹಾಗೆ ನಾವು ಅಗಲಿರುವುದಿಲ್ಲ' ಎಂದು ಯಮುನಾ ವಿಠಲರತ್ತ ವಾರೆನೋಟ ಬೀರುತ್ತಿದ್ದರು.ವಿಠಲ್ ಮರಣದ ಬಳಿಕ, ಯುಮನಾ ಜತೆ ಮಾತಾಡುವಾಗ, ತಮ್ಮ ಅಂತರಂಗದ ಮತ್ತು ಚಳುವಳಿಯ ನೆನಪುಗಳನ್ನು ಹೇಳಿಕೊಂಡರು. ವಿಠಲರ ಕೊನೆಯ ಗಳಿಗೆಗಳನ್ನು ಹಂಚಿಕೊಳ್ಳುವಾಗ, ಕೊರಳು ಗದ್ಗದಗೊಂಡಿತು. ದಿಟ್ಟೆಯಾದ ಅವರ ಅಳಲು ನನ್ನನ್ನು ಅಲುಗಿಸಿತು. ಅವರು 'ನಾನು ಮೇಲಕ್ಕೆ ಹತ್ತಲಾರದ ಪ್ರಪಾತದಲ್ಲಿದ್ದೇನೆ ಎಂದು ಅನಿಸುತ್ತಿದೆ' ಎಂದರು. ನಮ್ಮ ಹತ್ತಿರದಲ್ಲೇ ಸಹಜವಾಗಿ ಸದರವಾಗಿ ಸುಳಿದಾಡುತ್ತಿದ್ದ ಜೀವ ಖಾಯಮ್ಮಾಗಿ ಕಣ್ಮರೆಯಾದಾಗ ಆಘಾತವಾಗುತ್ತದೆ. ನಾನು ಕೇಳಿದೆ: 'ವಿಠಲ್ ಅವರ ಯಾವ ಗುಣ ನಿಮಗೆ ನೆನಪಾಗುತ್ತದೆ?' ಅವರೆಂದರು: 'ಸಹನೆ'. ನಿಜ. ಚಪ್ಪರದ ಕಂಬವೂ ಸಹನೆಯ ಮೂರ್ತಿಯೇ. ಚಳುವಳಿಗಳೆಂಬ ಮೂರ್ತ ಚಪ್ಪರಗಳಿಗೆ ಬಳ್ಳಿಮರೆಯಲ್ಲಿರುವ ಸಹನೆಯ ಕಂಬಗಳು ಕುಸಿದಾಗಲೇ ಅವಿದ್ದವು ಎಂದು ಗೊತ್ತಾಗುವುದು..

# 3 ಇಂಟರ್ ನ್ಯಾಷ್ನಲ್ ಮಾಡೆಲ್ ಶಾಲೆಗಳ ನಿರ್ಮಾಣ

## ಶಾಸಕ ಕೆ.ರಾಘವೇಂದ್ರ ಹಿಟ್ನಾಳ ಹೇಳಿಕೆ | ರೂ.25 ಕೋಟಿ ವೆಚ್ಚದ ಸುಸಜ್ಜಿತ ಕಟ್ಟಡ ನಿರ್ಮಾಣ | 560 ವಿದ್ಯಾರ್ಥಿಗಳಿಗೆ ಅನುಕೂಲ

■ ಹಂಪಿ ಟೈಮ್ಸ್ ಕೊಪ್ಪಳ

ಹಿಟ್ನಾಳ, ಭಾಗ್ಯನಗರ ಮತ್ತು ಕೊಪ್ಪಳದ ಶಾಸಕರ ಮಾದರಿ ಶಾಲೆ ಸೇರಿ ತಾಲ್ಲೂಕಿನಲ್ಲಿ ಮೂರು ಕಡೆ ಪ್ರಾಥಮಿಕ, ಪ್ರೌಢ ಹಾಗೂ ಪಿಯು ಕಾಲೇಜು ಒಳಗೊಂಡಂತೆ ರೂ. 12 ಕೋಟಿ ರೂ ವೆಚ್ಚದಲ್ಲಿ ಸರ್ಕಾರಿ ಇಂಟರ್ ನ್ಯಾಷ್ನಲ್ ಮಾಡೆಲ್ ಶಾಲೆಗಳನ್ನು ನಿರ್ಮಾಣ ಮಾಡಲಾಗುವುದು ಎಂದು ಕೊಪ್ಪಳ ಶಾಸಕರಾದ ಕೆ.ರಾಘವೇಂದ್ರ ಹಿಟ್ನಾಳ ಅವರು ಹೇಳಿದರು.



ಕೊಪ್ಪಳ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಸಹಯೋಗದಲ್ಲಿ ಕೊಪ್ಪಳ ತಾಲ್ಲೂಕಿನ ಲಿಂಗದಹಳ್ಳಿ ಗ್ರಾಮದಲ್ಲಿ ನೂತನವಾಗಿ ನಿರ್ಮಾಣಗೊಂಡ "ಡಾ.ಎ.ಪಿ.ಜೆ ಅಬ್ದುಲ್ ಕಲಾಂ ಸಿ.ಬಿ.ಎಸ್.ಸಿ ವಸತಿ ಶಾಲೆ ಮತ್ತು ಪದವಿ ಪೂರ್ವ ಕಾಲೇಜು" ಕಟ್ಟಡವನ್ನು ಜುಲೈ 03ರಂದು ರಿಬ್ಬನ್ ಕತ್ತರಿಸುವುದರ ಮೂಲಕ ಲೋಕಾರ್ಪಣೆಗೊಳಿಸಿ, ಬಳಿಕ ನಡೆದ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.


ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯನವರು 2015-16ನೇ ಸಾಲಿನ ಬಜೆಟ್‌ನಲ್ಲಿ ಎರಡು ಡಾ.ಎ.ಪಿ.ಜೆ ಅಬ್ದುಲ್ ಕಲಾಂ ವಸತಿ ಶಾಲೆಗಳನ್ನು ಘೋಷಣೆ ಮಾಡಿದ್ದು, ಇದರಲ್ಲಿ ಒಂದು ಶಾಲೆಯನ್ನು ಕೊಪ್ಪಳ ಕ್ಷೇತ್ರಕ್ಕೆ ನೀಡುವಂತೆ ಮನವಿ ಮಾಡಿಕೊಳ್ಳಲಾಗಿತ್ತು. ಅದರಂತೆ ಈ ವಸತಿ ಶಾಲೆಯನ್ನು ಕೊಪ್ಪಳಕ್ಕೆ ಮಂಜೂರಿಸಿ, ಕಾಮಗಾರಿ ಪ್ರಾರಂಭಿಸಿ, ಸಿ.ಬಿ.ಎಸ್.ಸಿ ಪಠ್ಯಕ್ರಮದ 6 ರಿಂದ 12ನೇ ತರಗತಿವರೆಗೆ ಮಕ್ಕಳ ಶೈಕ್ಷಣಿಕ ಅನುಕೂಲಕ್ಕೆ ಸುಸಜ್ಜಿತವಾದ ಕಟ್ಟಡವನ್ನು ಇಂದು ಲೋಕಾರ್ಪಣೆಗೊಳಿಸಲಾಗಿದೆ. ಕೊಪ್ಪಳ ವಿಧಾನಸಭಾ ಕ್ಷೇತ್ರಕ್ಕೆ ಅನೇಕ ದೊಡ್ಡ-ದೊಡ್ಡ ಯೋಜನೆಗಳನ್ನು ತರುವಂತಹ ಕೆಲಸವಾಗಿದ್ದು, ಶೈಕ್ಷಣಿಕ ರಂಗದಲ್ಲಿ ಮೊರಾರ್ಜಿ ಶಾಲೆಗಳು, ಅಬ್ದುಲ್ ಕಲಾಂ ವಸತಿ ಶಾಲೆಗಳು ಹಾಗೂ ಇತರ ಹಾಸ್ಟೆಲ್‌ಗಳಿಗೆ ಈ ವರ್ಷ ರೂ. 60 ಕೋಟಿಗಳನ್ನು ಕೊಪ್ಪಳ ಕ್ಷೇತ್ರಕ್ಕೆ ತರುವಂತಹ ಕೆಲಸವಾಗಿದೆ. ಇದರಿಂದ ಕೇವಲ ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗೆ ಅಲ್ಲದೆ ಎಲ್ಲಾ ಜಾತಿಯ ಅರ್ಹ ವಿದ್ಯಾರ್ಥಿಗಳು ಶಿಕ್ಷಣ ಪಡೆಯಬಹುದಾಗಿದೆ ಎಂದು ಹೇಳಿದರು.

ಕೊಪಳದಲ್ಲಿ ವೈದ್ಯಕೀಯ ಕಾಲೇಜು ಅಷ್ಟೇ ಅಲ್ಲದೇ ರೂ. 192 ಕೋಟಿ ವೆಚ್ಚದಲ್ಲಿ 450 ಹಾಸಿಗೆಯ ಆಸ್ಪತ್ರೆಯ ಕಟ್ಟಡವನ್ನು ಕಟ್ಟುವಂತಹ ಕೆಲಸವಾಗಿದ್ದು, ಶೀಘ್ರ ಆಸ್ಪತ್ರೆ ಪ್ರಾರಂಭಕ್ಕೆ ಕ್ರಮ ಕೈಗೊಳ್ಳಲಾಗುತ್ತಿದೆ. ಕೊಪ್ಪಳಕ್ಕೆ ಮಲ್ಟಿ ಸ್ಪೇಷಾಲಿಟಿ ಆಸ್ಪತ್ರೆಯನ್ನು ಕೊಡಲೇಬೇಕೆಂದು ಮುಖ್ಯಮಂತ್ರಿಗಳ ಬಳಿ ಪ್ರಸ್ತಾವನೆ ಇಡಲಾಗಿದೆ. ಕೊಪ್ಪಳ ವಿಧಾನಸಭಾ ಕ್ಷೇತ್ರದ 104 ಗ್ರಾಮಗಳಲ್ಲಿ 24*7 ಶುದ್ಧ ಕುಡಿಯುವ ನೀರು ಒದಗಿಸಲು ರೂ. 245 ಕೋಟಿ ವೆಚ್ಚದಲ್ಲಿ ಕಾಮಗಾರಿ ಪ್ರಾರಂಭಿಸಲಾಗಿದ್ದು, ಭಾಗ್ಯನಗರ-ಕೊಪ್ಪಳಕ್ಕೆ ಕುಡಿಯುವ ನೀರಿಗಾಗಿ 145 ಕೋಟಿ ವೆಚ್ಚದಲ್ಲಿ ಕಾಮಗಾರಿ ಪ್ರಾರಂಭಿಸಲಾಗುತ್ತಿದೆ. ನೀರಾವರಿಗಾಗಿ ರೂ. 780 ಕೋಟಿ ಅನುದಾನದಲ್ಲಿ ಕಾಮಗಾರಿಯನ್ನು ರೂಪಿಸಲಾಗುತ್ತಿದೆ.

ಕಾರ್ಯಕ್ರಮದಲ್ಲಿ ಕೊಪ್ಪಳ ತಾಲ್ಲೂಕ ಗ್ಯಾರೆಂಟಿ ಯೋಜನೆ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷರಾದ ಬಾಲಚಂದ್ರನ್, ಬೆವಿನಾಳ ಗ್ರಾಮ ಪಂಚಾಯತ್ ಅಧ್ಯಕ್ಷರಾದ ತಿಪ್ಪವ್ವ ಶಿವಪ್ಪ ನಾಯಕ, ಉಪಾಧ್ಯಕ್ಷರಾದ ಮುರಳಿ ಬಿಸರಳ್ಳಿ, ಸದಸ್ಯರಾದ ಅಂಜನಪ್ಪಲಿಂಗದಹಳ್ಳಿ,ಕೊಪ್ಪಳ ತಹಶೀಲ್ದಾರರಾದ ವಿಠ್ಠಲ್ ಚೌಗಲಾ, ತಾ.ಪಂ ಕಾರ್ಯನಿರ್ವಾಹಕ ಅಧಿಕಾರಿಗಳಾದ ದುಂಡಪ್ಪ ತುರಾತಿ, ಮಾಜಿ ಜಿಪಂ ಅಧ್ಯಕ್ಷರಾದ ಎಸ್.ಬಿ.ನಾಗರಳ್ಳಿ ಹಾಗೂ ಟಿ.ಜನಾರ್ಧನ ಹುಲಿಗಿ ಸೇರಿದಂತೆ ಹಲವು ಗಣ್ಯರು, ಜನಪ್ರತಿನಿಧಿಗಳು, ಉಪಸ್ಥಿತರಿದ್ದರು.

## ಕವಿ ಮನಸು

### ಶಂಕೆ ಕಳೆಯಿತು



ಸುತ್ತ ದನುಜೆಯರಿರಲು ಕಾವಲು
ಚಿತ್ತ ಸೀತೆಯ ನೋವ ಬಲೆಯೊಳು
ಚಿತ್ತದೊಲ್ಲಭನೆಂದು ಬರುವನು ತನ್ನ
ಪತಿರಾಯ
ಇತ್ತ ಬಂದಿಹ ಸದ್ದನಾಲಿಸಿ
ಕತ್ತು ಹೊರಳಿಸಿ ನೋಡೆ ಜಾನಕಿ
ಬಿತ್ತು ಕಣ್ಣಿಗೆ ಸನಿಹ ವಂದಿಸಿ ನಿಂತ
ಕಪಿವರ್ಯ

ದನುಜರಾಡುವ ಕಪಟ ನಾಟಕ–
–ವೆನುತ ರೋಷದಿ ಮಾತೆ ಸೀತೆಯು
ಕನಲಿ ಜರೆದಳು ತೊಲಗು ನಿಲ್ಲದೆ ನೀನು
ನನ್ನಿದಿರು
ಹನುಮ ನಿಂತನು ನಮಿಸಿ ಪುನರಪಿ
ವಿನಯದಿಂದಲೆ ನುಡಿದ ಮಾತೆಗೆ
ಮನದ ಶಂಕೆಯ ತೊರೆದು ದಯೆಯನು
ತಾಯೆ ನೀ ತೋರು

ಕರೆದು ನನ್ನನು ರಾಮ ನುಡಿದನು
ಶರಧಿ ಲಂಘಿಸಿ ಲಂಕೆ ಸೇರಲು
ಕರವ ಮುಗಿಯುವೆ ನಾನು ಹನುಮನು
ರಾಮಕಿಂಕರನು
ಇರಿಸಿ ಕರದಲಿ ರಾಮ ಕಳುಹಿದ
ಗುರುತಿಗಾಗಿಯೆ ಮುದ್ರೆಯುಂಗುರ
ತೊರೆದು ಸಂಶಯ ನೋಡಿದೆನ್ನುತ ಹನುಮ
ತೋರಿದನು

ಸೀತೆ ಮನಸಿನ ಶಂಕೆ ಕಳೆಯಿತು
ಮಾತೆ ಜಾನಕಿ ಹರಸಿ ಹನುಮನ
ಮಾತು ಹೊರಡದೆ ಖುಷಿಯ ಲಹರಿಯು
ತಂತು ಕಣ್ಣೀರು
ಕೂತು ಕಳೆದೆನು ನೋವಿನೊಂದಿಗೆ
ಸೋತು ಸೊರಗಿದೆ ಪತಿಯನಗಲುತ
ಹೂತು ಹೋಗಿದೆ ಮನದ ನೆಮ್ಮದಿ ಪತಿಗೆ
ನೀನರುಹು॥

– ಪೆರ್ಮುಖ ಸುಬ್ರಹ್ಮಣ್ಯ ಭಟ್

# ಅಜೇಯ ಭಾರತದ ಕ್ರಿಕೆಟ್ ವಿಶ್ವಕಪ್ ಚರಿತೆ

ಅದೊಂದು ಕಾಲವಿತ್ತು ಸಚಿನ್ ತೊಂಡಲ್ಕರ್ ಔಟ್ ಆದರೆ ಕ್ರಿಕೆಟ್ ಪ್ರೇಮಿಗಳು ಟಿ ವಿ ಆಫ್ ಮಾಡಿ ಬಿಡುತ್ತಿದ್ದರು, ಅಷ್ಟೊಂದು ಸಚಿನ್ ತೊಂಡಲ್ಕರ ಮೇಲೆ ಟೀಮ್ ಇಂಡಿಯಾ ಅವಲಂಬಿತವಾಗಿತ್ತು. ತದನಂತರ ಗಂಗೂಲಿ ನಾಯಕತ್ವದಲ್ಲಿ ಟೀಮ್ ಇಂಡಿಯಾಗೆ ಹೊಸ ಸ್ವರೂಪ ಬಂದು 2003 ರ ವಿಶ್ವಕಪ್ ನಲ್ಲಿ ಸಚಿನ್, ಗಂಗೂಲಿ, ದ್ರಾವಿಡ್, ಅನುಭವಿಗಳ ಜೊತೆಗೆ ವೀರೇಂದ್ರ ಸೆಹ್ವಾಗ, ಮಹಮದ್ ಕೈಫ್,ಯುವರಾಜ್ ಸಿಂಗ್, ಹರಭಜನ ಸಿಂಗ್, ಜಹೀರ ಖಾನ್ ಹೊಸ ಹುಡುಗರು ಟೀಮ್ ಸಿದ್ದಗೊಂಡು, ಆ ವರ್ಷ ಟೀಮ್ ಇಂಡಿಯ ಪೈನಲ್ಗೆ ತಲುಪಿತ್ತು, 1983 ವಿಶ್ವಕಪ್ ನಂತರ 2003 ರಲ್ಲಿ ಟೀಮ್ ಇಂಡಿಯ ಪೈನಲ್ ತಲುಪುದ್ದು ಒಂದು ಕಾಕತಾಳೀಯವೆನಿಸಿ ಈ ಭಾರಿ ವಿಶ್ವಕಪ್ ನಮಗೆ ಅನ್ನುವಂತೆ ವಿಶ್ವಾಸವಿತ್ತು.. ಆದರೆ ಪೈನಲ್ ಪಂದ್ಯದಲ್ಲಿ ಆಸ್ರೇಲಿಯಾ ಮೊದಲ ಬ್ಯಾಟಿಂಗ್ ಮಾಡಿ ದೊಡ್ಡ ಮೊತ್ತ ದಾಖಲಿಸಿ ಭಾರತ ತಂಡವನ್ನು ಅಲ್ಪಮೊತ್ತಕ್ಕೆ ಆಲ್ಔಟ್ ಮಾಡಿ ಸುಲಭವಾಗಿ ಪಂದ್ಯವನ್ನು ತನ್ನದಾಗಿಸಿಕೊಂಡು ಮೂರನೇ ಬಾರಿ ವಿಸ್ವಕಪ್ ಎತ್ತಿ ಹಿಡಿದಿತ್ತು.ಆ ದಿನ ನನಗಿನ್ನು ನೆನಪಿದೆ ಆಸ್ಟ್ರೇಲಿಯಾದಂತ ಆಟಗಾರರ ನಮ್ಮಲ್ಲಿ ಯಾಕೆ ಇಲ್ಲ, ಎದುರಾಳಿಗಳನ್ನು ಪಂದ್ಯದ ಮೊದಲಾರ್ಧದಲ್ಲಿ ಕುಗ್ಗಿಸುವಂತೆ ಆಡುವ ಅವರ ಆಕ್ರಮಣಶೀಲತೆ ಕ್ರಿಕೆಟ್ ನಮ್ಮಲ್ಲಿ ಇಲ್ಲ ಅಂತ ಕೊರಗಿಕೊಳ್ಳುತ್ತಿದ್ದೆ,



ಕೊಟ್ರೇಶ ಅಕ್ಕಿ
ಉಪನಾಯಕನಹಳ್ಳಿ ಬರಹಗಾರ

Hampi Times E-paper
SCAN AND READ

2007 ರಲ್ಲಿ ವೆಸ್ಟ್ ಇಂಡಿಸ್ ಅತಿಥ್ಯದಲ್ಲಿ ನಡೆದ 50 ಓವರ್ ಗಳ ವಿಶ್ವಕಪ್ನಲ್ಲಿ ಕನ್ನಡಿಗ ರಾಹುಲ್ ಡ್ರಾವಿಡ್ ನಾಯಕತ್ವದಲ್ಲಿ ಭಾರತ ತಂಡ ತೆರಳಿತ್ತು. ಲೀಗ ಹಂತದ ಪಂದ್ಯಗಳಲ್ಲಿ ಹೊರ ಬಿದ್ದಿತ್ತು. ಬಾಂಗ್ಲಾದಂತ ಕ್ರಿಕೆಟ್ ತಂಡದ ವಿರುದ್ದ ಸೋಲುನುಭಿಸಿತ್ತು.ಅದು ಭಾರತ ಕ್ರಿಕೆಟ್ ತಂಡಕ್ಕೆ ಬಿಸಿತುಪ್ಪವಾಗಿ, ಮಾಧ್ಯಮಗಳಿಂದ ಹಿಡಿದು ಮಾಜಿ ಕ್ರಿಕೆಟ್ ಪಟುಗಳ ತ್ರೀವ ಟೀಕೆಗೆ ಒಳಪಟ್ಟಿತ್ತು. ಅಭಿಮಾನಿಗಳು ಕೂಡ ತ್ರೀವ ನಿರಾಶೆಗೊಳಪಟ್ಟಿದ್ದರು.

2007 ರಲ್ಲಿ ಕ್ರಿಕೆಟ್ ಲೋಕಕ್ಕೆ ಹೊಸದಾಗಿ ಸೇರ್ಪಡೆಯಾಗಿದ್ದು ಟಿ20 ಚುಟುಕು ವಿಶ್ವಕಪ್. ಈ ವಿಶ್ವಕಪ್ ಗೆ ಭಾರತದ ಎಳೆ ತರುಣರ ತಂಡ ಸಿದ್ದವಾಗಿತ್ತು .ಅದು ದೋನಿ ನಾಯಕತ್ವದಲ್ಲಿ. ಯಾರು ಊಹಿಸದಿ ರೀತಿ ಭಾರತದ ಹುಡುಗರ ತಂಡ ಮೊದಲ ಚುಟುಕು ವಿಶ್ವಕಪ್ಗೆ ಮುತ್ತಿಟ್ಟಿತ್ತು. ಧೋನಿ ಎನ್ನುವ ಮಹಾನಾಯಕ ಉದಯಿಸಿದ ವರ್ಷವದು. ಭಾರತೀಯರಲ್ಲಿ ಇನ್ನಷ್ಟು ಕ್ರಿಕೆಟ್ ಹುಚ್ಚು ಎಬ್ಬಿಸಿದ ವರ್ಷವಾಗಿತ್ತು. ಈಗಿನ ಭಾರತದ ಖಪ್ತಾನ ರೋಹಿತ್ ಶರ್ಮ ಆಗಿನ್ನು ಎಳೆಯ ತರುಣ. ಎಲ್ಲೆಡೆ ಹೊಸ ಹೊಸ ತರುಣರ ಸಾಧನೆಗೆ ಪ್ರಶಂಸೆಯ ಸುರಿಮಳೆ ಸಿಕ್ಕಿತ್ತು.






ತದನಂತರ 2011 ರಲ್ಲಿನಡೆದ ಐವತ್ತು ಓವರ್‌ಗಳ ವಿಶ್ವ ಕಪ್ ನಲ್ಲಿ ಧೋನಿ ನಾಯಕತ್ವದಲ್ಲಿ ಭಾರತ ತಂಡವು ವಿಶ್ವಕಪ್ ಜಯಿಸಿತ್ತು. ನಮ್ಮ ಜನರೇಷನ್ ಕ್ರಿಕೆಟ್ ದೇವರು ಸಚಿನ್ ತೊಂಡಲ್ಕರ ಅವರಿಗೆ ಹೃದಯಪೂರ್ವಕ ಅಭಿನಂದನೆ ಸಲ್ಲಿಸಿತ್ತು. ಆ ದಿನ ತೊಂಡಲ್ಕರನ್ನು ಹೆಗಲ ಮೇಲೆ ಹೊತ್ತು ಮೆರೆಸಿದ ಆಟಗಾರರಾದ ವಿರಾಟ್ ಕೊಹ್ಲಿ ಹರಭಜನ್, ಪಿಯುಷ್, ಯೂಸುಪ್, ಭಾರತ ತಂಡವೆಂದರೆ ಒಬ್ಬರ ಮೇಲೆ ಅವಲಂಬಿತವಾಗಿಲ್ಲ ಯಾವುದೇ ಸಮಯದಲ್ಲಿ ಹನ್ನೊಂದು ಆಟಗಾರರು ಯಾವುದೇ ಸಮಯದಲ್ಲಿ ಮ್ಯಾಚ್ ಗೆದ್ದು ಕೊಡಬಹುದು ಎಂಬುದನ್ನ ಕ್ರಿಕೆಟ್ ಜಗತ್ತಿಗೆ ತಿಳಿಸಿಕೊಟ್ಟಿದ್ದರು.

ಕಳೆದ ದಶಕದಿಂದ ಭಾರತ ತಂಡವು ವಿದೇಶಿ ಪ್ರವಾಸದ ಅನೇಕ ಸರಣಿಗಳನ್ನು ಸಲೀಸಾಗಿ ಕೈ ವಶ ಮಾಡಿಕೊಳ್ಳುತ್ತಿತ್ತು. ದೋನಿ ನಾಯಕತ್ವದಲ್ಲಿ ತಂಡವು ವಿಶ್ವದ ಎಲ್ಲಾ ತಂಡಗಳನ್ನು ಬಗ್ಗು ಬಡಿದಿತ್ತು. ಯುವರಾಜ್ ಸಿಂಗ್ ಕೊಹ್ಲಿ, ರೋಹಿತ್, ಗಂಬೀರ್ ಜಡೇಜ್, ಅಶ್ವಿನ್ ಹೀಗೆ ಸಾಲು ಸಾಲು ಆಟಗಾರರು ಕೊಡುಗೆ ಅಪಾರವಾಗಿತ್ತು ಆ ಗೆಲುವುಗಳಲ್ಲಿ. ಆದರೆ ವಿಶ್ವಕಪ್ ನಂತಹ ಟೂರ್ನಿಗಳಲ್ಲಿ ಭಾರತ ತಂಡವ ಸೆಮಿ, ಪೈನಲ್ ಹೋಗಿ ಸೋತು ಸುಣ್ಣವಾಗಿತ್ತು. 2007ರ ಚುಟುಕು ವಿಶ್ವಕಪ್ 20011ರ ವಿಶ್ವಕಪ್ ಹಾಗೂ 2013 ಚಾಂಪಿಯನ್ಸ್ ಟ್ರೋಪಿಯನ್ನು ಭಾರತಕ್ಕೆ ಗೆಲ್ಲಿಸಿ ಕೊಟ್ಟ ದೋನಿ ಕೂಡ ಕೆಲ ಸೆಮಿ ಹಾಗೂ ಪೈನಲ್ ಮ್ಯಾಚ್ ಗೆಲ್ಲಲು ವಿಫಲವಾಗಿತ್ತು.. 2014,2016,ರ ಚುಟುಕು ವಿಶ್ವಕಪ್ನಲ್ಲಿ ಕ್ರಮವಾಗಿ ಪೈನಲ್, ಸೆಮಿಪೈನಲ್‌ಗೆ ತಲಒಳಗಾಗುತ್ತಿದ್ದರು. 2017 ರ ನಡೆದ ಚಾಂಪಿಯನ್ಸ್ ಟ್ರೋಪಿ ಪೈನಲ್ ಪಂದ್ಯದಲ್ಲಿ ಬದ್ಧ ಎದುರಾಳಿ ಪಾಕಿಸ್ತಾನದ ವಿರುದ್ದ ಕೊಹ್ಲಿ ನಾಯಕತ್ವದ ಭಾರತ ತಂಡ ಸೋತಿತ್ತು. 50 ಓವರಗಳ ವಿಶ್ವಕಪ್ ನಲ್ಲಿ 2019 ಹಾಗೂ 2023 ರಲ್ಲಿ ಕ್ರಮವಾಗಿ ಸೆಮಿಪೈನಲ್ ಹಾಗೂ ಪೈನಲ್ ಬಂದು ತಂಡ ಸೋತ್ತಿತ್ತು. 2021,ಹಾಗೂ 2023 ರಲ್ಲಿ ವಲ್ಡ್ ಟೆಸ್ಟ್ ಚಾಂಪಿಯನ್ಸ್ ಪೈನಲ್ ಗೆ ಬಂದು ಸೋತು ಹೋಗಿತ್ತು. ವಿಶ್ವವೇ ಬೆರಗಾಗುವ ಆಟಗಾರರಾದ ದೋನಿ, ಕೊಹ್ಲಿ, ರೋಹಿತ್, ಜಡೇಜ್, ಶಮಿ, ಬ್ರೂಮ್, ಶಿಖರ, ಸೂರ್ಯ, ರಾಹುಲ್, ಹಾರ್ದಿಕ್ ಇದ್ದಾಗಲೂ ತಂಡಕ್ಕೆ ಪೈನಲ್ ಗುಮ್ಮ ಕಾಡುತ್ತಿತ್ತು. ಎಲ್ಲಾ ಪಂದ್ಯಗಳು ಗೆದ್ದು ಪೈನಲ್ ಸೋಲುತ್ತಿದ್ದ ಕಾರಣಕ್ಕೆ ಅಭಿಮಾನಿಗಳು ಅಪಾರ ನಿರಾಶೆಗೆ ಒಳಗಾಗುತ್ತಿದ್ದರು.

2024 ಚುಟುಕು ವಿಶ್ವಕಪ್ ಪೈನಲ್ ನಲ್ಲಿ ಅಜೇಯರಾಗಿ ಬಂದ ಎರಡು ತಂಡಗಳು ಮದಗಜಗಳಂತೆ ಕಣಕ್ಕಿಳಿದಿದ್ದವು. ಪಂದ್ಯ ಶುರುವಾದಾಗಿನಿಂದ ಮುಗಿಯುವವರೆಗೆ ಕಾರ್ಡಿಯೋಗ್ರಾಮನ ಸೂಚಕದಂತೆ ಇತ್ತು.ಇನ್ನು ಏನು ಮತ್ತೊಂದು ಪೈನಲ್ ಮ್ಯಾಚ್ ಕೈ ತಪ್ಪಿ ಹೋಗುವುದು ಎನ್ನುವ ಭಯದಲ್ಲಿದ್ದಾಗ, ಪಂದ್ಯದ ಗತಿಯನ್ನು ಬದಲಾಯಿಸಿ, ಭಾರತಾಂಬೆಗೆ ಗೆಲುವಿಗೆ ಹೂ ಹಾರ ಹಾಕಿದ ಕೀರ್ತಿ ಭಾರತದ ಬೌಲರ್ಗಳಿಗೆ ಸಲ್ಲಬೇಕು.

ಆಸ್ಟ್ರೇಲಿಯಾ ತಂಡದಂತೆ ಭಾರತವು ಈ ದಶಕದಲ್ಲಿ ತುಂಬಾ ಸರಿ ಸೆಮಿ ಪೈನಲ್ ಹಾಗೂ ಪೈನಲ್ ಮ್ಯಾಚ್ ತಲುಪಿದೆ. ಆದರೆ ಟ್ರೋಪಿ ವಶ ಪಡಿಸಿಕೊಳ್ಳುವುದರಲ್ಲಿ ಎಡವುತ್ತಿತ್ತು. ಈ ಬಾರಿ ವಿಶ್ವಕಪ್ ಕೊಹ್ಲಿಗೆ ರೋಹಿತ್, ಜಡೇಜ್ ಕೊನೆಯದಾಗಿತ್ತು ಹಾಗೆ ಕನ್ನಡಿಗ ರಾಹುಲ್ ದಾವಿಡ್ ಅವರ ಕೋಚ್ ಅವದಿಯಲ್ಲಿ ಕಪ್ ಜಯಿಸಬೇಕೆಂಬ ಮಹಾದಾಸೆ ಎಲ್ಲರದಾಗಿತ್ತು. ನಿಜಕ್ಕೂ ದಕ್ಷಿಣ ಆಪ್ರೀಕಾ ವಿರುದ್ಧ ರೋಚಕವಾಗಿ ಪಂದ್ಯಗೆದ್ದು ಈ ಚುಟುಕು ವಿಶ್ವಕಪ್ ಚಾಂಪಿಯನ್ಸ್ ಆದ ಭಾರತ ತಂಡ ಚಾಂಪಿಯನ್ಸ್ ಪಟ್ಟಕ್ಕೆ ಅರ್ಹವಾಗಿದ್ದು. ಕಳೆದ ಹತ್ತು ವರ್ಷಗಳಲ್ಲಿ ಐಸಿಸಿ ಟ್ರೋಫಿ ಬರವನ್ನು ದೂರ ಮಾಡಿದೆ ಕ್ರಿಕೆಟ್ ಪ್ರಿಯರಲ್ಲಿ ಹರ್ಷದ ಮಳೆ ತರಿಸಿದೆ. ಈ ಜನರೇಷನ್ ಹುಡುಗರ ನೆಚ್ಚಿನ ಕ್ರೀಡಾಪಟುಗಳ ವಿರಾಟ್ ಕೊಹ್ಲಿ, ರೋಹಿತ್ ಶರ್ಮ ಹಾಗೂ ರವಿಂದ್ರ ಜಡೇಜಾ ಅವರುಗಳ ವಿದಾಯದೊಂದಿಗೆ ಭಾರತ ವಿಶ್ವಕಪ್ ಗೆದ್ದದ್ದು ಅರ್ಥಪೂರ್ಣ ಬಿಳ್ಕೊಡುಗೆ ಮೂವರು ಆಟಗಾರರಿಗೆ ಸಿಕ್ಕಂತಾಗಿದೆ.

ಜೊತೆಗೆ ಭಾರತ ಕ್ರಿಕೆಟ್ ತಂಡ ಕಂಡ ಅಗ್ರಮಾನ್ಯ ಆಟಗಾರ ರಾಹುಲ್ ದ್ರಾವಿಡ್ ಗರಡಿಯಲ್ಲಿ ಪಳಗಿದ ಈ ತಂಡ ಕಪ್ ಜಯಿಸಿದ್ದು ರಾಹುಲ್ ಡ್ರಾವಿಡ್ ಅವರಿಗೆ ದೊಡ್ಡ ಶ್ರೇಯ ಸಿಕ್ಕಾಂತಾಗಿದೆ.ಎಲ್ಲ ಆಟಗಾರರಲ್ಲಿ ಸಮನ್ವಯ ಸಾಧಿಸಿ ಕಪ್ ಗೆಲ್ಲುವ ತಂಡವನ್ನು ವೆಸ್ಟ್ ಇಂಡಿಸ್ ಗೆ ಕರೆದೊಯ್ದು, 2007 ರಲ್ಲಿ ವೆಸ್ಟ್ ಇಂಡೀಸ್ ನಲ್ಲಿ ಸೋತ ಕಹಿ ನೆನಪು ಮರೆಯಲು ಈ ಬಾರಿ ವಿಶ್ವಕಪ್ ಜಯಿಸಿದ್ದು ಕ್ರಿಕೆಟ್ ತಂಡಕ್ಕೆ ದ್ರೋಣಚಾರರಾಗಿ ಕೋಚ್ ಆಗಿದ್ದ ರಾಹುಲ್ ದ್ರಾವಿಡ್ ಅವರ ಬದುಕಿನಲ್ಲಿ ಸಿಹಿ ನೆನಪಾಗಿ ಉಳಿಯಿತು.

ಈ ಬಾರಿಯ ಚುಟುಕು ವಿಶ್ವಕಪ್ ಗೆಲುವು ವಿಶ್ವ ಕ್ರಿಕೆಟ್ನಲ್ಲಿ ಭಾರತದ ಶಕ್ತಿಯನ್ನು ತೋರಿಸಿಕೊಟ್ಟಿದ್ದೆ. ಇಲ್ಲಿವರೆಗೂ ಆಸ್ಟ್ರೇಲಿಯಾ ತಂಡವು ಒಟ್ಟು 7 ವಿಶ್ವಕಪ್ ಟ್ರೋಪಿಗಳನ್ನು ಪಡೆದು ಅಗ್ರಮಾನ್ಯವಾಗಿದ್ದು.ವೆಸ್ಟ್ ಇಂಡೀಸ್ ಹಾಗೂ ಭಾರತ ತಂಡಗಳು ತಲಾ 4 ಬಾರಿ ಕ್ರಿಕೆಟ್ ವಿಶ್ವಕಪ್ ಜಯಿಸಿದ್ದು. ಮುಂದಿನ ವರ್ಷಗಳಲ್ಲಿ ಮತ್ತಷ್ಟು ವಿಶ್ವಕಪ್ ಭಾರತ ತಂಡ ತಮ್ಮದಾಗಿಸಿಕೊಂಡು. ಕ್ರಿಕೆಟ್ ಪ್ರೇಮಿಗಳ ಅಭಿಮಾನ ಗಳಿಸಲಿ. ಸದ್ಯ ಭಾರತದಲ್ಲಿ ಎಲ್ಲವೂ ಧರ್ಮಗಳ ಮೇಲೆ ನಿರ್ಧರಿತವಾಗುತ್ತಿದ್ದು.ಕ್ರಿಕೆಟ್ ಎನ್ನುವ ಧರ್ಮವು ಎಲ್ಲರನ್ನು ಒಗ್ಗೂಡಿಸಲಿ. ನಾವೆಲ್ಲರು ಮೊದಲು ಭಾರತೀಯರು ಎಂಬ ಭಾವವನ್ನು ಗಟ್ಟಿಗೊಳಿಸಲಿ.

## ಜಾದು ದರ್ಪಣ



ಎನ್ನಂದ ದರ್ಪಣದಿ ನೋಡ ಹೋದೆನಲ್ಲ
ದರ್ಪಣದಿ ನಿನ್ನ ವದನವು ಕಂಡಿತಲ್ಲ
ಮನ ನಿನಗೆ ಎಂದೋ ಅರ್ಪಿತವಾಗಿದೆಯಲ್ಲ
ಆದರೂ ನೀನೆನ್ನ ಬಿಡದೇ ಕಾಡುವೆಯಲ್ಲ

ಈ ದರ್ಪಣಕೆ ಡಾಟಾ ನೆಟ್ ವರ್ಕ್ ಬೇಕಿಲ್ಲ
ನಿನ್ನ ಮನದಿ ನೆನೆಯಲು ಒಡನೇ
ಕಂಡಿಹೆಯಲ್ಲ
ಎಂಥ ಅದ್ಬುತ ಜಾದು ದರ್ಪಣ ನೀ
ಕೊಟ್ಟೆಯಲ್ಲ
ರಿಚಾರ್ಜ್ ಮಾಡಿಸುವ ಮೊಬೈಲ್ ಗೊಡವೆ
ಬೇಕಿಲ್ಲ

ಧನ ಇದ್ದರೂ ನಡಿತೈತಿ ಇಲ್ಲದಿದ್ದರೂ
ನಂದಿತೈತೆ
ಗೆಳತಿ ಕೇಳಿದಳು ಈ ದರ್ಪಣ ಎಲ್ಲಿ ಸಿಗತೈತೆ
ಹೇಳಿದೆ ಅವಳಿಗೆ ಈ ದರ್ಪಣ ಎಲ್ಲ ಕಡೆ
ಸಿಗತೈತೆ
ಆದರೆ ಎರಡು ಹೃದಯದ ಮಿಡಿತ
ಒಂದಾದರೆ
ಮಾತ್ರ ಮೊಬೈಲ್ ನಂತೆ ಕೆಲಸ ಮಾಡುತೈತೆ

– ಕೆ ಎಂ ಬಸವರಾಜ ಹೊಸಪೇಟೆ

# ಡೆಂಗಿ ತಡೆಗೆ ಹೀಗೆ ಮಾಡಿ

ಎಲ್ಲೆಲ್ಲೂ ಡೆಂಗೆ ಜ್ವರದ ಸುದ್ದಿ, ಹೆಚ್ಚುತ್ತಿರುವ ಪ್ರಕರಣಗಳು, ಇದು ಆತಂಕ ಪಡುವ ವಿಷಯ ಇದ್ದರು ಕೂಡ ಜಾಗ್ರತೆ ಅಗತ್ಯವಿದೆ. ಸೂಕ್ತ ಸಮಯಕ್ಕೆ ವೈದ್ಯರ ತಪಾಸಣೆ ಕೂಡ ಅಗತ್ಯ. ಇದು ಡೆಂಗೆ ವೈರಸ ನಿಂದ, ide ಈಜಿಪ್ಟ್-ಟೈಗರ್ ಸೊಳ್ಳೆ ಕಚುವುದರಿಂದ ಬರುವ ಜ್ವರ.



ರೋಗ ಲಕ್ಷಣಗಳು _ ವಿಪರೀತ ಜ್ವರ, ಚಳಿ, ನಡುಕ, ತಲೆ ನೋವು, ಹೊಟ್ಟೆ ನೋವು, ವಾಂತಿ, ಮೈ ಕೈ ನೋವು, ಮೈ ಮೇಲೆ ಕೆಂಪು ಬಣ್ಣದ ಗುಳ್ಳೆಗಳು.ರಕ್ತಪರೀಕ್ಷೆ_ಬಿಳಿರಕ್ತಕಣಗಳು(platelet), ಹಿಮೋಗ್ಲೋಬಿನ್ ಪ್ರಮಾಣ, NS1elisa test _ನಾಲ್ಕು ದಿವಸದ ಜ್ವರ ಇದ್ದಾಗ, ನಾಲ್ಕು ದಿನದಿಂದ ಏಳು ದಿವಸದ ಜ್ವರ ಕ್ಕೆ, IgM Elisa test, ಈ ಪರೀಕ್ಷೆಗಳು 70% dengue ಜ್ವರ ಎಂದು ದೃಡೀಕರಣ ಮಾಡಲು ಸಹಾಯ. NS1rapid test, ಎಲ್ಲಾ ಖಾಸಗಿ ಪ್ರಯೋಗಾಲಯ ದಲ್ಲಿ ಮಾಡುತ್ತಾರೆ, ಆದರೆ ಆ ಪರೀಕ್ಷೆ ಬರಿ 30% ಮಾತ್ರ ದೃಡೀಕರಣ ಮಾಡುತ್ತದೆ, ವೈದ್ಯರು ರೋಗ ಲಕ್ಷಣಗಳ ಸಹಾಯದಿಂದ, dengue ಜ್ವರ ಅಂತ ನಿರ್ಧಾರ ಮಾಡುತ್ತಾರೆ.

NS1 Elisa ಮತ್ತು IgM Elisa ರಕ್ತ ಪರೀಕ್ಷೆಯನ್ನು, ಎಲ್ಲಾ ಜಿಲ್ಲಾ ಆಸ್ಪತ್ರೆಯಲ್ಲಿ ಇರುವ ಸಾರ್ವಜನಿಕ ಪ್ರಯೋಗಾಲಯದಲ್ಲಿ (DPHL lab) ಪರೀಕ್ಷೆ ಮಾಡುತ್ತಾರೆ. ಚಿಕಿತ್ಸೆ–ವೈದ್ಯರು ರೋಗ ಲಕ್ಷಣಗಳ ಮಾಹಿತಿ ಮೇರೆಗೆ ಮತ್ತು ಪೂರ್ಣ ಪ್ರಮಾಣದ ದೇಹದ ಪರೀಕ್ಷೆ ಮತ್ತು ರಕ್ತದ ಪರೀಕ್ಷೆ ನಂತರ ಚಿಕಿತ್ಸೆ ನೀಡುತ್ತಾರೆ. ಬಹಳ ಮುಖ್ಯವಾಗಿ ಬಿಳಿ ರಕ್ತ ಕಣಗಳ ಮಾಪನ 48 ಘಂಟೆಗೆ ಒಮ್ಮೆ ಮಾಡಿ, 2 ಲಕ್ಷದ ಮೇಲೆ ಇದೆಯಾ ಇಲ್ಲ ಎಂದು ನೋಡಬೇಕು. ಡೆಂಗೆ ಜ್ವರ ಇದ್ದಾಗ antibiotic ಮಾತ್ರೆ ಬೆಕಾಗುವುದಿಲ್ಲ, ಬರೇ paracetmol ಮಾತ್ರೆ 650 mg ದಿನಕ್ಕೆ, 6 ಘಂಟೆ ಗೆ ಒಮ್ಮೆ ಕೊಟ್ಟರೆ ಸಾಕು, ಮೂರು ದಿನಗಳಿಗೆ. ರೋಗ ಲಕ್ಷಣಗಳ ಚಿಕಿತ್ಸೆ ನೀಡಿದರೆ ಸಾಕು. ಆದರೆ ಡೆಂಗೆ ಜ್ವರ ವ್ಯಕ್ತಿಯ ರಕ್ತದ ಒತ್ತಡ, ನಾಡಿ ಮಿಡಿತ, ಆಮ್ಲಜನಕ ಪೂರೈಕೆ ಮಾಪನ, ಉಸಿರಾಟದ ಕೌಂಟ, ಬಿಳಿ ರಕ್ತ ಕಣಗಳ ವೀಕ್ಷಣೆ ಮಾಡಿ, ಅವಲೋಕನ ಮಾಡಬೇಕು. ಬಿಳಿ ರಕ್ತ ಕಣಗಳು ಪ್ರಮಾಣ ಕಮ್ಮಿ ಆಗಿ ಒಮ್ಮೊಮ್ಮೆ ಜೀವ ಹೋಗುವ ಸಾಧ್ಯತೆ ಇದೆ.

ನಿರ್ಮೂಲನೆ–ಮನೆಯ ಸುತ್ತಮುತ್ತ ನೀರು ನಿಲ್ಲುತ್ತದೆ, ಡ್ರಮ್, ಟೈರ್, ನೀರಿನ ಕುಂಡಗಳು, ನೀರಿನ ತೊಟ್ಟಿ, ತೆರೆದ drainage ಗಳಲ್ಲಿ ನೀರು ನಿಂತು, ಸೊಳ್ಳೆಯ ಸಂತತಿ ಬೆಳೆಯಲು ಸಹಕಾರಿ ಆಗುತ್ತೆ. ಹಾಗಾಗಿ, ಪ್ರತಿ ದಿನ ನೀರು ನಿಲ್ಲದೆ ಹಾಗೆ ನೋಡಿ ಕೊಳ್ಳಬೇಕು. ಮಳೆಗಾಲದಲ್ಲಿ ಡೆಂಗೆ ಪ್ರಕರಣಗಳು ಹೆಚ್ಚಾಗು ವುದು, ಈ ಸೊಳ್ಳೆಯ ಕಡಿತದಿಂದ, ಅದು ದಿನದ ಮತ್ತು ಸಂಜೆ ವೇಳೆ ಕಚ್ಚಿ ಬರುವ ಜ್ವರ.

ಡೆಂಗೆ ಜ್ವರ ನಿಯಂತ್ರಣಕ್ಕೆ, ರಾತ್ರಿ ಮಲಗುವಾಗ ಸೊಳ್ಳೆಯ ಪರದೆ ಉಪಯೋಗಿಸವುದರಿಂದ fogging ಮಾಡುವುದರಿಂದ, gyambosi ಮೀನು ನೀರು ಶೇಖರಣೆ ಮಾಡಿರುವ ತೊಟ್ಟಿಯಲ್ಲಿ, ಡ್ರಮ್ ನಲ್ಲಿ ಹಾಕಿದರೆ, ಸೊಳ್ಳೆಯ ಸಂತತಿ ತಡಗಟ್ಟಲು ಸಾಧ್ಯವಾಗುತ್ತದೆ. ಎಲ್ಲರೂ ಮಳೆಗಾಲದಲ್ಲಿ ಡೆಂಗೆ ಜ್ವರದ ಬಗ್ಗೆ ಮುನ್ನೆಚ್ಚರಿಕೆ ಕ್ರಮಗಳನ್ನು ಅನುಸರಿಸಿ, ಡೆಂಗೆ ಜ್ವರ ಬರದ ಹಾಗೆ ಆರೋಗ್ಯ ಕಾಪಾಡಿಕೊಳ್ಳ ಬೇಕು. ಒಳ್ಳೆಯ ಆರೋಗ್ಯವೆ ಜೀವನದ ಆಸ್ತಿ. ನಮ್ಮ ಒಳ್ಳೆಯ ಆರೋಗ್ಯ ಸಂತೋಷದ ಜೀವನ ನಡೆಸಲು ಸಹಕಾರ. ಡೆಂಗೆ ಜ್ವರದ ಬಗ್ಗೆ ಆರೋಗ್ಯದ ಅರಿವು ಜನರಲ್ಲಿ ಮೂಡಬೇಕು ಮತ್ತು ಡೆಂಗೆ ಸಾವು ತಡೆಗಟ್ಟಬೇಕು.

– ವೈದ್ಯ ಜಡಿ ರವಿಕಾಂತಿ
ಯಸ್ ಕ್ಯಾತನಾಳ್, ಜಿಲ್ಲಾ ತರಬೇತಿ ಕೇಂದ್ರದ ಪ್ರಾಂಶುಪಾಲರು ಕಲಬುರಗಿ.

# ಬಿಡಾಡಿ ದನಗಳ ಮಾಲೀಕರಿಗೆ ಸೂಚನೆ

■ ಹಂಪಿ ಟೈಮ್ಸ್ ಕೊಪ್ಪಳ

ಕೊಪ್ಪಳ ನಗರದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ದನಗಳನ್ನು ರಸ್ತೆಗೆ ಬಿಡುತ್ತಿದ್ದು, ಇದರಿಂದಾಗಿ ಸಾರ್ವಜನಿಕರಿಗೆ ಸಾಕಷ್ಟು ತೊಂದರೆ ಉಂಟಾಗುತ್ತಿದೆ. ಬಿಡಾಡಿ ದನಗಳ ಮಾಲೀಕರು ತಮ್ಮ ಜಾನುವಾರುಗಳನ್ನು ಮನೆಯಲ್ಲಿ ಕಟ್ಟಿ ಹಾಕಿಕೊಳ್ಳಬೇಕು ಎಂದು ಕೊಪ್ಪಳ ನಗರಸಭೆ ಪೌರಾಯುಕ್ತರು ತಿಳಿಸಿದ್ದಾರೆ.

ಬಿಡಾಡಿ ದನಗಳು ನಗರದ ತುಂಬೆಲ್ಲಾ ಹೆಚ್ಚಿನ ಪ್ರಮಾಣದಲ್ಲಿ ಇರುತ್ತವೆ. ಬಿಡಾಡಿ ದನಗಳಿಂದ ಸಾರ್ವಜನಿಕರಿಗೆ ತೊಂದರೆ ಉಂಟಾಗುತ್ತದೆ. ನಗರದಲ್ಲಿ ಹಾಯ್ದು ಹೋಗಿರುವ ರಾಷ್ಟ್ರೀಯ ಹೆದ್ದಾರಿಯಲ್ಲಿ ರಸ್ತೆ ಮಧ್ಯದಲ್ಲಿ ಬಿಡಾಡಿ ದನಗಳು ಮಲಗುವುದರಿಂದ ವಾಹನ ಸಂಚಾರಕ್ಕೆ ತೊಂದರೆ ಉಂಟಾಗಿದ್ದು, ಇದರಿಂದ ರಸ್ತೆ ಅಪಘಾತಗಳು ಕೂಡಾ ಸಂಭವಿಸುತ್ತವೆ. ಬಿಡಾಡಿ ದನಗಳು ತರಕಾರಿ ಮಾರುಕಟ್ಟೆಗಳಲ್ಲಿ ತರಕಾರಿಗಳನ್ನು ತಿನ್ನುವ ನೂಕು–ನುಗ್ಗಲಿನಲ್ಲಿ ಮಾರುಕಟ್ಟೆಗೆ ಬಂದಿರುವ ಸಾರ್ವಜನಿಕರಿಗೆ ತೊಂದರೆ ಉಂಟಾಗಿರುತ್ತದೆ. ಹಾಗೂ ತರಕಾರಿ ಮಾರಾಟಗಾರರಿಗೂ ಸಹ ತುಂಬಾ ತೊಂದರೆ ಉಂಟಾಗಿರುತ್ತದೆ. ನಗರದ ವಿವಿಧ ಬಡಾವಣೆಗಳಲ್ಲಿ ಕಿರಿದಾದ ರಸ್ತೆಗಳಲ್ಲಿ ದನಗಳು ಗುದ್ದಾಡುತ್ತಾ ಓಡಿ ಬುರುವುದರಿಂದ ಸಣ್ಣ ಪುಟ್ಟ ಮಕ್ಕಳಿಗೆ ಹಾಗೂ ದ್ವಿಚಕ್ರ ವಾಹನ ಸವಾರರಿಗೆ ಸಹ ಅಪಘಾತ ಉಂಟಾಗುತ್ತಿವೆ. ರಸ್ತೆ ಮಧ್ಯದಲ್ಲಿ ಬಿಡಾಡಿ ದನಗಳು ಗುಂಪು ಗುಂಪಾಗಿ ನಿಲ್ಲುವುದರಿಂದ ಟ್ರಾಫಿಕ್ ಜಾಮ್ ಆಗಿ ಅಪಘಾತ ಉಂಟಾಗುತ್ತಿವೆ. ಮತ್ತು ವಾಹನ ಸಂಚಾರಕ್ಕೆ ತೊಂದರೆ ಉಂಟಾಗುತ್ತಿವೆ.

ಆದಕಾರಣ ಸಂಬಂಧಪಟ್ಟ ದನಗಳ ಮಾಲೀಕರುಗಳು ಈ ಸಾರ್ವಜನಿಕ ಪ್ರಕಟಣೆ ಪ್ರಕಟಗೊಂಡ 01 ದಿನದೊಳಗಾಗಿ ತಮ್ಮ ತಮ್ಮ ದನಕರುಗಳನ್ನು ತಮ್ಮ ಮನೆಯಲ್ಲಿ ಕಟ್ಟಿಹಾಕಿಕೊಂಡು ಸಾಕಬೇಕು. ಇಲ್ಲವೇ ದನಗಳಿಗೆ ಪರ್ಯಾಯ ವ್ಯವಸ್ಥೆ ಮಾಡಿಕೊಳ್ಳಬೇಕು. ಬಿಡಾಡಿ ದನಗಳನ್ನು ನಗರಸಭೆ ವಶಕ್ಕೆ ಪಡೆದುಕೊಂಡು ಗೋಶಾಲೆಗೆ ಹಸ್ತಾಂತರಿಸಲಾಗುವುದು. ನಂತರ ಯಾರಾದರೂ ಮಾಲೀಕರು ತಮ್ಮದೇ ದನಗಳೆಂದು ನಗರಸಭೆ ಕಚೇರಿಗೆ ಬಂದಲ್ಲಿ ತಮ್ಮ ಮೇಲೆ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದ್ದಾರೆ.

# ಜು. 06ಕ್ಕೆ ವಾಕ್ ಇನ್ ಇಂಟರ್‌ವ್ಯೂವ್

■ ಹಂಪಿ ಟೈಮ್ಸ್ ಕೊಪ್ಪಳ

ಜಿಲ್ಲಾಡಳಿತ ಭವನದಲ್ಲಿರುವ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ ಕಚೇರಿಯಲ್ಲಿ ಜುಲೈ 06 ರಂದು ಬೆಳಿಗ್ಗೆ 10 ಗಂಟೆಯಿಂದ ಮಧ್ಯಾಹ್ನ 1.30 ಗಂಟೆಯವರೆಗೆ ವಾಕ್ ಇನ್ ಇಂಟರ್‌ವ್ಯೂವ್ ಆಯೋಜಿಸಲಾಗಿದೆ.

ವಾಕ್ ಇನ್ ಇಂಟರ್‌ವ್ಯೂವ್‌ನಲ್ಲಿ ಖಾಸಗಿ ಸಂಸ್ಥೆಗಳು ಭಾಗವಹಿಸಲಿದ್ದು, ತಮ್ಮಲ್ಲಿನ ಖಾಲಿ ಹುದ್ದೆಗಳನ್ನು ನೇರ ಸಂದರ್ಶನದ ಮೂಲಕ ನೇಮಕಾತಿ ಮಾಡಿಕೊಳ್ಳಲಿದ್ದಾರೆ. ಇಂಟರ್‌ವ್ಯೂವ್‌ಗೆ ಎಲ್ಲರಿಗೂ ಉಚಿತ ಪ್ರವೇಶವಿದ್ದು, ಯಾರಿಗೂ ಶುಲ್ಕವಿರುವುದಿಲ್ಲ.

ಎಂ.ಬಿ.ಎ–ಸೇಲ್ಸ್ ಮತ್ತು ಮಾರ್ಕೆಟಿಂಗ್(3 ರಿಂದ 10 ವರ್ಷ ಅನುಭವ), ಎಂ.ಬಿ.ಎ –ಫೈನಾನ್ಸ್ (2 ರಿಂದ 5 ವರ್ಷ ಅನುಭವ), ಬಿ.ಇ, ಬಿ.ಟೆಕ್., ಬಿಸಿಎ, ಎಂ.ಸಿ.ಎ(2 ವರ್ಷ ಅನುಭವ), ಐಟಿಐ–ಫಿಟ್ಟರ್, ಮಶಿನಿಷ್ಟ್ (8 ರಿಂದ 15 ವರ್ಷ ಅನುಭವ), ಡಿಪ್ಲೋಮಾ–ಮೆಕ್ಯಾನಿಕಲ್ (8 ರಿಂದ 15 ವರ್ಷ ಅನುಭವ), ಎಂ.ಬಿ.ಎ–ಎಚ್.ಆರ್, ಎಂ.ಎಸ್.ಡಬ್ಲ್ಯೂ– ಎಚ್.ಆರ್(3 ರಿಂದ 6 ವರ್ಷ ಅನುಭವ), ಬಿ.ಎಸ್ಸಿ–ಕೆಮಿಸ್ಟ್ರಿ, ಬಯೋಲಾಜಿ, ಮೈಕ್ರೋ ಬಯೋಲಾಜಿ(0 ರಿಂದ 3 ವರ್ಷ ಅನುಭವ), ಬಿ.ಕಾಂ, ಎಂ.ಕಾಂ(3 ರಿಂದ 5 ವರ್ಷ ಅನುಭವ), ಬಿ.ಇ– ಎಲೆಕ್ಟ್ರಿಕಲ್, ಇನ್‌ಸ್ಟ್ರುಮೆಂಟೇಷನ್, ಎಲೆಕ್ಟ್ರಾನಿಕ್ಸ್ (5 ರಿಂದ 8 ವರ್ಷ ಅನುಭವ) ವಿದ್ಯಾರ್ಹತೆ ಹೊಂದಿದ ಅಭ್ಯರ್ಥಿಗಳು ಇಂಟರ್‌ವ್ಯೂವ್‌ನಲ್ಲಿ ಭಾಗವಹಿಸಬಹುದು. ಅಭ್ಯರ್ಥಿಗಳಿಗೆ ನೇರ ಸಂದರ್ಶನ ಮೂಲಕ ನೇಮಕಾತಿ ಮಾಡಿಕೊಳ್ಳಲಾಗುತ್ತದೆ. ವಾಕ್ ಇನ್ ಇಂಟರ್‌ವ್ಯೂವ್‌ನಲ್ಲಿ ಭಾಗವಹಿಸುವ ಅಭ್ಯರ್ಥಿಗಳು (ಯುವಕ ಮತ್ತು ಯವತಿಯರು) ನಿರುದ್ಯೋಗಿ ಅಭ್ಯರ್ಥಿಗಳು ತಮ್ಮ ವಿದ್ಯಾರ್ಹತೆಯ ಎಲ್ಲ ಪ್ರಮಾಣ ಪತ್ರಗಳು ಮತ್ತು ಆಧಾರ ಕಾರ್ಡಿನ ಪ್ರತಿ, ಬಯೋಡಾಟಾ ಹಾಗೂ ಪಾಸ್‌ಪೋರ್ಟ್ ಅಳತೆಯ ಭಾವಚಿತ್ರಗಳೊಂದಿಗೆ ಹಾಜರಾಗಿ, ಉದ್ಯೋಗದ ನೆರವನ್ನು ಪಡೆಯುಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ, ಜಿಲ್ಲಾ ಆಡಳಿತ ಭವನ, ಮೊದಲನೇ ಮಹಡಿ, ಕೊಪ್ಪಳ ಇವರನ್ನು ಸಂಪರ್ಕಿಸಿ.

ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ. ಕೈಯಲ್ಲೊಂದು ಕನ್ನಡ ಪತ್ರಿಕೆ ಇರಲಿ.
ಡಿ..ವಿ.ಜಿ.

## ನಿತ್ಯ ಪಂಚಾಂಗ

ಮಾಸ: ಜ್ಯೇಷ್ಠ । ಸಂವತ್ಸರ: ಕ್ರೋಧಿ

**04–07–2024 – ಗುರುವಾರ**

| | |
|---|---|
| ತಿಥಿ | : ತ್ರಯೋದಶಿ |
| ಪಕ್ಷ | : ಕೃಷ್ಣ |
| ನಕ್ಷತ್ರ | : ಮೃಗಶಿರ |
| ಯೋಗ | : ಗಂಡ |
| ಕರಣ | : ವಾಣಿಜ |
| ಸೂರ್ಯೋದಯ | : 05:47:11 |
| ಸೂರ್ಯಾಸ್ತ | : 19:15:38 |
| ರಾಹು | : 14:12–15:54 |
| ಯಮಘಂಡ | : 05:47–07:28 |
| ಗುಳಿಕ | : 09:09–10:50 |

## ತುಂಗಭದ್ರಾ ನೀರಿನ ಮಟ್ಟ



**ಬುಧವಾರ : 03–07–2024**

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1587.11 ಅಡಿ |
| ಒಳ ಹರಿವು | 10503 ಕ್ಯುಸೆಕ್ |
| ಹೊರ ಹರಿವು | 296 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 8.782 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| ಕಳೆದ ವರ್ಷ ಇದೇ ದಿನ | |
| ಇಂದಿನ ಮಟ್ಟ | 1576.5 ಅಡಿ |
| ಒಳ ಹರಿವು | 190 ಕ್ಯುಸೆಕ್ |
| ಹೊರ ಹರಿವು | 260 ಕ್ಯುಸೆಕ್ |
| ಸಾಮರ್ಥ್ಯ | 3.003 ಟಿಎಂಸಿ |

# ಪಿಎಂ ಆವಾಸ್ ಯೋಜನೆ: ಆದ್ಯತೆ ಮೇರೆಗೆ ಅಪೂರ್ಣ ಮನೆಗಳ ಕಾಮಗಾರಿ ಪೂರ್ಣಗೊಳಿಸಿ: ಸಿಎಂ



■ ಹಂಪಿ ಟೈಮ್ಸ್ ಬೆಂಗಳೂರು

ಪ್ರಧಾನ ಮಂತ್ರಿ ಆವಾಸ್ ಯೋಜನೆ ಅಡಿ ಈಗಾಗಲೇ ಪ್ರಾರಂಭವಾಗಿರುವ ಮನೆಗಳ ಕಾಮಗಾರಿಯನ್ನು ಆದ್ಯತೆಯ ಮೇರೆಗೆ ಪೂರ್ಣಗೊಳಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸೂಚಿಸಿದರು.

ಅವರು ಕೃಷ್ಣಾದಲ್ಲಿ ಬುಧವಾರ ವಸತಿ ಇಲಾಖೆಯ ವಿವಿಧ ಯೋಜನೆಗಳ ಪ್ರಗತಿ ಪರಿಶೀಲನೆ ನಡೆಸಿದರು.

ಕೊಳಚೆ ನಿರ್ಮೂಲನೆ ಮಂಡಳಿ ಅಡಿಯಲ್ಲಿ 82 ಸಾವಿರ ಮನೆಗಳು, ರಾಜೀವ್ ಗಾಂಧಿ ವಸತಿ ನಿಗಮ ಅಡಿಯಲ್ಲಿ47800 ಮನೆಗಳು ಒಟ್ಟು 1.30 ಲಕ್ಷ ಮನೆಗಳು ನಿರ್ಮಾಣದ ವಿವಿಧ ಹಂತಗಳಲ್ಲಿದ್ದು, ಅವುಗಳ ನಿರ್ಮಾಣ ಕಾರ್ಯವನ್ನು ಹಂತ ಹಂತವಾಗಿ ಪೂರ್ಣಗೊಳಿಸಲು ಆದ್ಯತೆ ನೀಡುವಂತೆ ಮುಖ್ಯಮಂತ್ರಿಗಳು ತಿಳಿಸಿದರು.

ಪ್ರತಿ ಮನೆಯ ನಿರ್ಮಾಣದ ಘಟಕ ವೆಚ್ಚ 6 ರಿಂದ 7.5 ಲಕ್ಷಗಳಾಗಿದ್ದು ಕೇಂದ್ರ ಮತ್ತು ರಾಜ್ಯ ಸರ್ಕಾರದ ಸಹಾಯಧನವನ್ನು ಹೊರತುಪಡಿಸಿ, ಬಾಕಿ ಸುಮಾರು 4 ರಿಂದ 5 ಲಕ್ಷ ರೂಪಾಯಿಗಳ ವಂತಿಕೆ ಮೊತ್ತವನ್ನು ಫಲಾನುಭವಿಗಳೇ ಭರಿಸಬೇಕಾಗಿತ್ತು. ಈ ಮೊತ್ತವನ್ನು ಆರ್ಥಿಕವಾಗಿ ಆಶಕ್ತರಾಗಿರುವ ಕೊಳಗೇರಿ ನಿವಾಸಿಗಳು ಪಾವತಿಸಲು ಕಷ್ಟಕರವಾಗಿ ಮನೆಗಳ ಕಾಮಗಾರಿಗಳು ಅರ್ಧಕ್ಕೆ ನಿಂತಿದ್ದವು. ಆದುದರಿಂದ, ಫಲಾನುಭವಿಗಳ ಮೇಲಿನ ವಂತಿಕೆ ಹೊರೆಯನ್ನು ಕಡಿಮೆ ಮಾಡಿ, ಒಂದು ಲಕ್ಷಕ್ಕೆ ನಿಗಧಿಗೊಳಿಸಿ, ಪ್ರತಿ ಫಲಾನುಭವಿಗೆ ಬಾಕಿ ರೂ.4.00 ಲಕ್ಷಗಳಂತೆ ಸರ್ಕಾರದಿಂದಲೇ ಭರಿಸಲು ಅನುಮೋದನೆ ನೀಡಲಾಗಿದ್ದು, ಪ್ರಥಮ ಹಂತದಲ್ಲಿ ರೂ. 500ಕೋಟಿ ಮಂಜೂರು ಮಾಡಲಾಗಿದೆ. ಹೆಚ್ಚುವರಿ ಅನುದಾನ ಬಗ್ಗೆ ಹಣಕಾಸು ಇಲಾಖೆಯೊಂದಿಗೆ ಚರ್ಚಿಸಿ ಕ್ರಮ ಕೈಗೊಳ್ಳಲು ಸೂಚನೆ ನೀಡಿದರು.

ಫಲಾನುಭವಿಗಳ ಪಾಲಿನ ಒಂದು ಲಕ್ಷ ರೂ. ವಂತಿಕೆ ಮೊತ್ತವನ್ನು ಸಂಗ್ರಹಿಸುವ ಮೂಲಕ ನಿರ್ಮಾಣಕಾರ್ಯವನ್ನುಚುರುಕುಗೊಳಿಸಬೇಕು ಎಂದು ಸೂಚಿಸಿದರು.

ಕಲ್ಯಾಣ ಕರ್ನಾಟಕ ಜಿಲ್ಲೆಗಳಲ್ಲಿ 592 ಕೊಳೆಗೇರಿಗಳ ಅಭಿವೃದ್ಧಿಗೆ ಕೂಡಲೇ ಪ್ರಸ್ತಾವನೆ ಸಲ್ಲಿಸುವಂತೆ ಮುಖ್ಯಮಂತ್ರಿಗಳು ಸೂಚಿಸಿದರು.

ಕರ್ನಾಟಕಗೃಹ ಮಂಡಳಿಯಲ್ಲಿ ಭೂಸ್ವಾಧೀನ ಮಾಡಿಕೊಂಡ ಜಮೀನಿನಲ್ಲಿ ತ್ವರಿತವಾಗಿ ಕಾಮಗಾರಿ ಕೈಗೊಳ್ಳಬಹುದು. ಆದರೆ 50:50 ಅನುಪಾತದ ಹಂಚಿಕೆ ಆಧಾರದಲ್ಲಿ ಜಮೀನು ಪಡೆದುಕೊಂಡರೆ, ರೈತರಿಗೆ ಮರುಹಂಚಿಕೆ ಮಾಡುವ ಭೂಮಿಯ ಪರಿವರ್ತನೆಯಲ್ಲಿ ವಿಳಂಬವಾಗುತ್ತಿದ್ದು,ಈ ಬಗ್ಗೆ ನೋಂದಣಿ ಮತ್ತು ಮುದ್ರಾಂಕ, ಕಂದಾಯ ಹಾಗೂ ಗ್ರಾಮೀಣಾಭಿವೃದ್ಧಿ ಇಲಾಖೆಯವರೊಂದಿಗೆ ಚರ್ಚಿಸಿ, ಕ್ರಮ ಕೈಗೊಳ್ಳುವಂತೆ ಸೂಚಿಸಿದರು.

ಸಭೆಯಲ್ಲಿ ವಸತಿ ಸಚಿವ ಜಮೀರ್ ಅಹ್ಮದ್ ಖಾನ್, ಕರ್ನಾಟಕ ಗೃಹ ಮಂಡಳಿ ಅಧ್ಯಕ್ಷ ಶಿವಲಿಂಗೇಗೌಡ, ಕರ್ನಾಟಕ ಕೊಳೆಗೇರಿ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಪ್ರಸಾದ್ ಅಬ್ಬಯ್ಯ, ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿ ನಸೀರ್ ಅಹ್ಮದ್, ಮುಖ್ಯ ಮಂತ್ರಿಯವರ ಅಪರ ಮುಖ್ಯ ಕಾರ್ಯದರ್ಶಿ ಎಲ್. ಕೆ. ಅತೀಕ್, ವಸತಿ ಇಲಾಖೆ ಕಾರ್ಯದರ್ಶಿ ನವೀನ್ ರಾಜ್ ಸಿಂಗ್, ಆರ್ಥಿಕ ಇಲಾಖೆ ಕಾರ್ಯದರ್ಶಿ ಎಂ.ಟಿ. ರೇಜು, ಉಪ ಕಾರ್ಯದರ್ಶಿ ಇಕ್ರಂ ಶರೀಫ್ ಮತ್ತು ಇತರ ಹಿರಿಯ ಅಧಿಕಾರಿಗಳು ಸಭೆಯಲ್ಲಿ ಇದ್ದರು.

## ನೋಂದಣಿಯಾಗದಿರುವ ಕೀಟನಾಶಕ ಉಪಯೋಗಿಸಬೇಡಿ

ಹಂಪಿ ಟೈಮ್ಸ್ ಬಳ್ಳಾರಿ

ಜಿಲ್ಲೆಯ ಬಳ್ಳಾರಿ ಹಾಗೂ ಕುರುಗೋಡು ತಾಲ್ಲೂಕಿನ ವ್ಯಾಪ್ತಿಯಲ್ಲಿ ಬಿತ್ತನೆ ಕಾರ್ಯ ಶುರುವಾಗಿದ್ದು, ರೈತರು ನೋಂದಣಿಯಾಗದ ಬೀಜ, ರಸಗೊಬ್ಬರ, ಕೀಟನಾಶಕ ಅಥವಾ ಗ್ರಾಮಗಳಲ್ಲಿ ನೇರವಾಗಿ ಯಾವುದೇ ಪರವಾನಿಗೆ ಇಲ್ಲದೇ ಮಾರಾಟ ಮಾಡುವ ಪರಿಕರಗಳನ್ನು ಉಪಯೋಗಿಸ ಬಾರದು ಎಂದು ಸಹಾಯಕ ಕೃಷಿ ನಿರ್ದೇಶಕ ದಯಾನಂದ ಅವರು ತಿಳಿಸಿದ್ದಾರೆ.

ಯಾವುದೇ ಗ್ರಾಮದಲ್ಲಿ ಪರವಾನಿಗೆ ಇಲ್ಲದೇ ಬೀಜ, ರಸಗೊಬ್ಬರ ಹಾಗೂ ಕೀಟನಾಶಕಗಳನ್ನು ಮಾರಾಟ ಮಾಡಿದಲ್ಲಿ ಕೂಡಲೇ ಕೃಷಿ ಇಲಾಖೆಯ ಅಧಿಕಾರಿಗಳ ಗಮನಕ್ಕೆ ತರಬೇಕು. ಬೀಜ, ರಸಗೊಬ್ಬರ ಹಾಗೂ ಕೀಟನಾಶಕಗಳನ್ನು ಖರೀದಿಸುವಾಗ ಕಡ್ಡಾಯ ವಾಗಿ ರಶೀದಿ ಪಡೆದುಕೊಳ್ಳಬೇಕು. ರಶೀದಿ ಗಳನ್ನು ಬೆಳೆಯ ಹಂತ ಮುಗಿಯುವ ವರೆಗೂ ಇಟ್ಟುಕೊಳ್ಳಬೇಕು ಎಂದು ತಿಳಿಸಿದ್ದಾರೆ.


# ಜನರಿಗೆ ಗ್ಯಾರಂಟಿ ಯೋಜನೆ ಸರಿಯಾಗಿ ತಲುಪಲಿ: ಕೆ.ರಾಘವೇಂದ್ರ ಹಿಟ್ನಾಳ

■ ಹಂಪಿ ಟೈಮ್ಸ್ ಕೊಪ್ಪಳ

ರಾಜ್ಯ ಸರಕಾರ ಬಡವರಿಗೆ ಆರಂಭಿಸಿರುವ ಐದು ಗ್ಯಾರಂಟಿ ಯೋಜನೆಗಳನ್ನು ನಿಲ್ಲಿಸುವದಿಲ್ಲ, ಜನರಿಗೆ ಯೋಜನೆಗಳು ಇನ್ನಷ್ಟು ಪರಿಣಾಮಕಾರಿಯಾಗಿ ತಲುಪಲು ಅಧಿಕರಿಗಳು ಮತ್ತು ಸಮಿತಿಯವರು ಶ್ರಮಿಸಬೇಕು ಎಂದು ಕೊಪ್ಪಳ ಶಾಸಕರಾದ ಕೆ.ರಾಘವೇಂದ್ರ ಹಿಟ್ನಾಳ ಅವರು ಹೇಳಿದರು.

ನಗರದ ತಾಲ್ಲೂಕ ಪಂಚಾಯತಿಯಲ್ಲಿ ಸರಕಾರದ ನಿರ್ದೇಶನದ ಮೇರೆಗೆ ಕೊಪ್ಪಳ ತಾಲ್ಲೂಕ ಗ್ಯಾರಂಟಿ ಅನುಷ್ಠಾನ ಸಮಿತಿಯ ಕಾರ್ಯಾಲಯವನ್ನು ಪ್ರಾರಂಭಿಸಿ, ಸನ್ಮಾನ ಸ್ವೀಕರಿಸಿ ಅವರು ಮಾತನಾಡಿದರು.

ರಾಜ್ಯ ಸರಕಾರದ ಸಮಾಜಮುಖಿ ಯೋಜನೆಯಾದ ಗ್ಯಾರಂಟಿ ಸ್ಕೀಂಗಳ ಸಮರ್ಪಕ ಅನುಷ್ಠಾನಕ್ಕೆ ಸರಕಾರೇತರ ಸಮಿತಿ ರಚನೆ ಮಾಡಿದ್ದು, ಮೂರು ಹಂತದ ಸಮಿತಿಯನ್ನು ರಚಿಸಲಾಗಿದೆ. 98% ಜನರಿಗೆ ಸೌಲಭ್ಯ ಸಿಕ್ಕಿದ್ದು, ಕೆಲವರಿಗೆ ತಾಂತ್ರಿಕ ಕಾರಣಗಳಿಂದ ಸೌಲಭ್ಯ ಬಂದಿಲ್ಲ. ತಾಂತ್ರಿಕ ಸಮಸ್ಯೆಗಳನ್ನು ಶೀಘ್ರ ಸರಿ ಮಾಡಲಾಗುವದು



ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಗ್ಯಾರಂಟಿ ಯೋಜನೆಗಳು ಐದು ವರ್ಷ ಪಕ್ಕಾ ಗ್ಯಾರಂಟಿ ಇರುತ್ತವೆ, ಸಾಮಾಜಿಕ ಜಾಲತಾಣಗಳಲ್ಲಿನ ಸುಳ್ಳನ್ನು ಸಹ ನಂಬಬೇಡಿ ಎಂದರು.

ಈ ಸಂದರ್ಭದಲ್ಲಿ ತಾಲ್ಲೂಕು ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷರಾದ ಬಾಲಚಂದ್ರನ್ ಸ್ಯಾಮುವೇಲ್, ಸದಸ್ಯ ಕಾರ್ಯದರ್ಶಿಗಳಾದ ದುಂಡಪ್ಪ ತುರಾದಿ, ಸದಸ್ಯರುಗಳಾದ ಜ್ಯೋತಿ ಮಂಜುನಾಥ ಗೊಂಡಬಾಳ, ದೇವರಾಜ ನಡುವಿನಮನಿ, ರಾಮಣ್ಣ ಚೌಡ್ಕಿ ಹಟ್ಟಿ, ಪರಶುರಾಮ ಕೊರವರ, ಅಶೋಕ ಗೋರಂಟ್ಲಿ, ಆನಂದಪ್ಪ ಕಿನ್ನಾಳ, ಲಕ್ಷ್ಮಣ ಡೊಳ್ಳಿನ್ ಮತ್ತು ಮಾನವಿ ಪಾಶಾ, ರಮೇಶ ಹ್ಯಾಟಿ ಭಾಗ್ಯನಗರ, ತಹಶೀಲ್ದಾರರಾದ ವಿಠ್ಠಲ ಚೌಗಲಾ, ಸಿಡಿಪಿಒ ಜಯಶ್ರೀ, ಕೆಇಬಿ ಎಇಇ ಸಲೀಂ, ಕೆಇಬಿ ಮುನಿರಾಬಾದಿನ ಸಂತೋಷ ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿದ್ದರು.

# ರೈತರು ತಮ್ಮ ಬೆಳೆ ವಿವರಿಸಲು 'ಮುಂಗಾರು ರೈತರ ಬೆಳೆ ಸಮೀಕ್ಷೆ 2024' ಆ್ಯಪ್ ಬಳಸಿ

■ ಹಂಪಿ ಟೈಮ್ಸ್ ಬಳ್ಳಾರಿ

ಪ್ರಸ್ತಕ ಸಾಲಿನ ಮುಂಗಾರು ಹಂಗಾಮಿನ ಬೆಳೆ ಸಮೀಕ್ಷೆ ಆರಂಭವಾಗಿದ್ದು, ಕಳೆದ ಬಾರಿಯಂತೆ ಈ ಬಾರಿಯೂ ಬೆಳೆ ಸಮೀಕ್ಷೆ ಕಾರ್ಯದಲ್ಲಿ ರೈತರು ಸ್ವತ: ತಮ್ಮ ಜಮೀನಿನಲ್ಲಿ ತಾವು ಬೆಳೆದ ಬೆಳೆಯ ವಿವರ ದಾಖಲಿಸಲು "ಮುಂಗಾರು ರೈತರ ಬೆಳೆ ಸಮೀಕ್ಷೆ 2024" ಆಪ್ ಬಳಸಿಕೊಳ್ಳಬಹುದು ಎಂದು ಸಹಾಯಕ ಕೃಷಿ ನಿರ್ದೇಶಕ ದಯಾನಂದ ಅವರು ತಿಳಿಸಿದ್ದಾರೆ.

ಜಿಲ್ಲೆಯ ಬಳ್ಳಾರಿ ಮತ್ತು ಕುರುಗೋಡು ತಾಲ್ಲೂಕಿನ ರೈತರು ತಮ್ಮ ಜಮೀನಿನಲ್ಲಿ ಬೆಳೆದ ಬೆಳೆ ವಿವರ ದಾಖಲಿಸಲು "ಮುಂಗಾರು ರೈತರ ಬೆಳೆ ಸಮೀಕ್ಷೆ 2024" ಎಂಬ ಹೆಸರಿನ ಮೊಬೈಲ್ ಆಪ್ ಅನ್ನು ಗೂಗಲ್ ಪ್ಲೇ–ಸ್ಟೋರ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಮೊಬೈಲ್ ಆಪ್ ಬಳಕೆ ಮಾಡುವ ರೀತಿಯನ್ನು ರೈತರಿಗೆ ತಿಳಿಸಲು ಪ್ರತಿ ಗ್ರಾಮದಲ್ಲಿ ನುರಿತ ಖಾಸಗಿ ನಿವಾಸಿಗಳನ್ನು ನೇಮಿಸಲಾಗಿದೆ.

**ರೈತರು ಬೆಳೆ ಸಮೀಕ್ಷೆಗೆ ಮೊಬೈಲ್ ಆಪ್ ಬಳಸಲು ಈ ರೀತಿ ಅನುಸರಿಸಿ:**

ಗೂಗಲ್ ಪ್ಲೇ–ಸ್ಟೋರ್‌ನಲ್ಲಿ "ಮುಂಗಾರು ರೈತರ ಬೆಳೆ ಸಮೀಕ್ಷೆ 2024" ಎಂದು ಹುಡುಕಿ ಡೌನ್‌ಲೋಡ್ ಮಾಡಿಕೊಂಡು ಆಧಾರ್ ವಿವರ ಮತ್ತು ಮೊಬೈಲ್ ನಂಬರ್ ಅನ್ನು ನಮೂದಿಸಿ ಸಕ್ರಿಯಗೊಳಿಸಲು ಓಟಿಪಿ ನಮೂದಿಸಬೇಕು. ಮೊಬೈಲ್ ಆಪ್‌ನಲ್ಲಿ ಮೊದಲು ಮಾಸ್ಟರ್ ವಿವರಗಳನ್ನುಡೌನ್‌ಲೋಡ್ ಮಾಡಿಕೊಳ್ಳಬೇಕು.

ನಂತರ ತಮ್ಮ ಜಮೀನಿನ ಸರ್ವೆ ನಂಬರ್‌ಗಳನ್ನು ಸೇರಿಸಿಕೊಳ್ಳಬೇಕು. ಮುಂದಿನ ಹಂತದಲ್ಲಿ ರೈತರು ತಮ್ಮ ಜಮೀನಿನಲ್ಲಿ ಬೆಳೆದ ಬೆಳೆ ವಿವರಗಳನ್ನು ದಾಖಲಿಸಬೇಕು. ಈ ಹಂತದಲ್ಲಿ ರೈತರು ತಮ್ಮ ಜಮೀನಿನಲ್ಲಿ ಪಾಳು ಬಿದ್ದಿರುವ ಪ್ರದೇಶ, ಈಗಾಗಲೇ ಕಟಾವಾದ ಪ್ರದೇಶ, ಕೃಷಿಯೇತರ ಬಳಕೆಗೆ (ಕೊಟ್ಟಿಗೆ, ಕೃಷಿ ಹೊಂಡ, ಮನೆ ಇತರೆ) ಬಳಕೆಯಾದ ಪ್ರದೇಶದ ವಿವರ ಸಹ ದಾಖಲಿಸಬೇಕಾಗಿರುತ್ತದೆ.

ರೈತರು ತಾವು ಬೆಳೆದ ಪ್ರತಿ ಬೆಳೆಯ ವಿಸ್ತೀರ್ಣದ ಜೊತೆಗೆ ಪ್ರತಿ ಬೆಳೆಯ ಎರಡು ಛಾಯಚಿತ್ರಗಳನ್ನು ಸೆರೆಹಿಡಿದು ಅಪ್ಲೋಡ್ ಮಾಡಬೇಕಾಗುತ್ತದೆ. ಅಪ್‌ಲೋಡ್ ಮಾಡಲಾದ ಮಾಹಿತಿಯನ್ನು ಪ್ರತಿ ಗ್ರಾಮಕ್ಕೆ ನೇಮಿಸಲಾದ ಸರ್ಕಾರಿ ಅಧಿಕಾರಿಗಳು (ಮೇಲ್ವಿಚಾರಕರು) ಪರಿಶೀಲಿಸಿ ರೈತರು ದಾಖಲಿಸಿದ ಬೆಳೆ ವಿವರಕ್ಕೂ, ಛಾಯಚಿತ್ರಕ್ಕೂ ತಾಳೆಹೊಂದಿದಲ್ಲಿ ವಿವರವನ್ನು ಅನುಮೋದಿಸುತ್ತಾರೆ.

ಒಂದು ವೇಳೆ, ರೈತರು ತಮ್ಮ ಸ್ನೇಹಿತರು ಅಥವಾ ಸಂಬಂಧಿಕರಿಗೆ ಸಹಾಯ ಮಾಡುವುದಾದರೆ ಅವರ ಸರ್ವೆ ನಂಬರ್‌ಗಳನ್ನು ಸಹ ತಮ್ಮ ಮೊಬೈಲ್ ಆಪ್‌ನಲ್ಲಿ ಸೇರಿಸಿಕೊಂಡು ಅವರ ಜಮೀನಿನ ವಿವರ ದಾಖಲಿಸಲೂ ಸಹ ಮೊಬೈಲ್ ಆಪ್‌ನಲ್ಲಿ ಅವಕಾಶ ಕಲ್ಪಿಸಲಾಗಿದೆ.

ಬೆಳೆ ಸಮೀಕ್ಷೆ ಮಾಹಿತಿಯನ್ನು ಎನ್.ಡಿ.ಆರ್. ಎಫ್/ಎಸ್.ಡಿ.ಆರ್.ಎಫ್ ಅಡಿಯಲ್ಲಿ ಪ್ರವಾಹ ಮತ್ತು ಬರಗಾಲ ಸಂದರ್ಭದಲ್ಲಿ ನೀಡುವ ನಷ್ಟ ಪರಿಹಾರ ವಿತರಿಸಲು, ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಅರ್ಹ ಫಲಾನುಭವಿಗಳನ್ನು ಗುರುತಿಸಲು, ಬೆಳೆ ವಿಮಾ ಯೋಜನೆಯಡಿ ಬೆಳೆ ವಿವರ ಪರಿಶೀಲಿಸಲು, ಸಾಂಖ್ಯಿಕ ಇಲಾಖೆ, ಕೃಷಿ, ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆಗಳ ಬೆಳೆ ವಿಸ್ತೀರ್ಣ ವರದಿ ಕಾರ್ಯದಲ್ಲಿ, ಬೆಳೆ ಕಟಾವು ಪ್ರಯೋಗಗಳನ್ನು ಕೈಗೊಳ್ಳಲು, ಬೆಳೆ ಮಾನದಂಡಗಳಿಗೆ ಅನುಗುಣವಾಗಿ ಕೃಷಿ, ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆಗಳ ಫಲಾನುಭವಿ ಆಧಾರಿತ ಯೋಜನೆಗಳ ಅನುಷ್ಠಾನಕ್ಕೆ, ಪಹಣಿಯಲ್ಲಿ ಬೆಳೆ ವಿವರ ದಾಖಲಿಸಲು, ಬ್ಯಾಂಕ್ ಮತ್ತು ವ್ಯವಸಾಯ ಸೇವಾ ಸಹಕಾರಿ ಸಂಘಗಳ ಮುಖಾಂತರ ಬೆಳೆ ಸಾಲ ನೀಡುವ ಸಂದರ್ಭದಲ್ಲಿ ಬೆಳೆ ಪರಿಶೀಲನೆ ಮಾಡಲು ಹಾಗೂ ಮುಂತಾದ ಸರ್ಕಾರದ ಯೋಜನೆಗಳಿಗೆ ಬಳಸಲಾಗುತ್ತದೆ.

ರೈತರು ಸದರಿ ಅವಕಾಶ ಸದುಪಯೋಗ ಪಡೆದುಕೊಂಡು ತಮ್ಮ ಜಮೀನಿನಲ್ಲಿ ಬೆಳೆದ ಬೆಳೆ ವಿವರಗಳನ್ನು ತಾವೇ ಸರ್ಕಾರಕ್ಕೆ ನಿಗಧಿತ ಸಮಯದೊಳಗೆ ವರದಿ ಮಾಡಬೇಕು. ಹೆಚ್ಚಿನ ಮಾಹಿತಿಗಾಗಿ ಕಂದಾಯ, ಕೃಷಿ, ತೋಟಗಾರಿಕೆಯ ಅಧಿಕಾರಿಗಳನ್ನು ಸಂಪರ್ಕಿಸಬಹುದು.

### ವಿಕಲಚೇತನರ, ಹಿರಿಯ ನಾಗರಿಕರ ಸಬಲೀಕರಣ ಇಲಾಖೆ

# ರಾಷ್ಟ್ರ ಪ್ರಶಸ್ತಿಗೆ ಅರ್ಜಿ ಆಹ್ವಾನ

■ ಹಂಪಿ ಟೈಮ್ಸ್ ಬಳ್ಳಾರಿ

ಪ್ರಸ್ತಕ ಸಾಲಿನಲ್ಲಿ ಕೇಂದ್ರ ಸರ್ಕಾರವು ವಿಕಲಚೇತನರ ಸಬಲೀಕರಣಕ್ಕಾಗಿ ವಿವಿಧ ಕ್ಷೇತ್ರಗಳಲ್ಲಿ ಅತ್ಯುತ್ತಮ ಸಾಧನೆ ಮಾಡಿದ ಬಳ್ಳಾರಿ ಜಿಲ್ಲೆಯ ವ್ಯಕ್ತಿ, ಸಂಸ್ಥೆಗಳಿಂದ ರಾಷ್ಟ್ರ ಪ್ರಶಸ್ತಿಗೆ ಅರ್ಜಿ ಆಹ್ವಾನಿಸಲಾಗಿದೆ.

**ಬೇಕಾದ ದಾಖಲೆಗಳು:** 2 ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ (ವೈಯಕ್ತಿಕ ವಿಭಾಗ), ಅರ್ಜಿದಾರರ ವ್ಯಕ್ತಿ, ಸಂಸ್ಥೆಗಳ ಸ್ವವಿವರ ಹಾಗೂ ಸಾಧನೆಗಳ ಸಾರಾಂಶ ಪೂರಕ ದಾಖಲೆ, ಡ್ರಾಫ್ಟ್ ಸೈಟೇಷನ್(1 ಪುಟಕ್ಕೆ ಮೀರದಂತೆ) ಹಾಗೂ ಇತರೆ ದಾಖಲೆ ಸಲ್ಲಿಸಬೇಕು.

ಅರ್ಜಿ ಸಲ್ಲಿಸಲು www.awards.gov.in ಮತ್ತು www.depwd.gov.in ವೆಬ್–ಸೈಟ್‌ಗೆ ಭೇಟಿ ನೀಡಬಹುದು. ಆನ್‌ಲೈನ್‌ನಲ್ಲಿ ತಮ್ಮ ಎಲ್ಲಾ ದಾಖಲಾತಿಗಳನ್ನು ಭರ್ತಿ ಮಾಡಿ ಸಲ್ಲಿಸಿದ ಅರ್ಜಿ ಮತ್ತು ದಾಖಲೆಗಳ ಪ್ರತಿಯನ್ನು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳ ಕಚೇರಿಗೆ ಸಲ್ಲಿಸಬೇಕು.

ಅರ್ಜಿಗಳನ್ನು ಜು.31 ರೊಳಗಾಗಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳ ಕಚೇರಿ ಅಥವಾ ದೂ.08392–267886 ಗೆ ಸಂಪರ್ಕಿಸಬಹುದು ಎಂದು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ಹೆಚ್. ಗೋವಿಂದಪ್ಪ ತಿಳಿಸಿದ್ದಾರೆ.

# ವಿವಿಧ ಯೋಜನೆಗಳಡಿ ಸೌಲಭ್ಯಕ್ಕಾಗಿ ಅರ್ಜಿ ಆಹ್ವಾನ

■ ಹಂಪಿ ಟೈಮ್ಸ್ ಬಳ್ಳಾರಿ

ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯಿಂದ 2024–25 ನೇ ಸಾಲಿಗೆ 13 ವಿವಿಧ ಫಲಾನುಭವಿ ಆಧಾರಿತ ಯೋಜನೆಗಳಡಿ ಜಿಲ್ಲೆಯ ವಿಕಲಚೇತನರಿಂದ (ಅಂಗವಿಕಲರು) ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ ಎಂದು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ಹೆಚ್. ಗೋವಿಂದಪ್ಪ ಅವರು ತಿಳಿಸಿದ್ದಾರೆ.

**ಯೋಜನೆಗಳು:** ಆಧಾರ ಯೋಜನೆ, ಮೆರಿಟ್ ವಿದ್ಯಾರ್ಥಿಗಳಿಗಾಗಿ ಪ್ರೋತ್ಸಾಹಧನ ಯೋಜನೆ, ಮರಣ ಪರಿಹಾರ ನಿಧಿ, ವೈದ್ಯಕೀಯ ಪರಿಹಾರ ನಿಧಿ, ನಿರುದ್ಯೋಗ ಭತ್ಯೆ, ಪ್ರತಿಭೆ ಯೋಜನೆ, ಸಾಧನೆ ಯೋಜನೆ, ಶಿಶುಪಾಲನಾ ಭತ್ಯೆ, ಅಂಧ ವಿದ್ಯಾರ್ಥಿಗಳಿಗೆ ಟಾಕಿಂಗ್ ಲ್ಯಾಪ್‌ಟಾಪ್ ಯೋಜನೆ, ದೈಹಿಕ ವಿಕಲಚೇತನರಿಗೆ ಯಂತ್ರಚಾಲಿತ ದ್ವಿಚಕ್ರ ವಾಹನ ಯೋಜನೆ, ಸಾಧನ ಸಲಕರಣೆ ಯೋಜನೆ, ಶ್ರವಣ ದೋಷ ವ್ಯಕ್ತಿಗಳಿಗೆ ಸ್ವಯಂ ಉದ್ಯೋಗಕ್ಕಾಗಿ ಹೊಲಿಗೆ ಯಂತ್ರ ಯೋಜನೆ, ದೃಷ್ಠಿದೋಷ ಹೊಂದಿರುವ ವಿಕಲಚೇತನರಿಗೆ ಬ್ರೈಲ್ ಕಿಟ್ ಯೋಜನೆ.

ಮೇಲ್ಕಂಡ ಯೋಜನೆಗಳಿಗೆ ಸೇವಾಸಿಂಧು, ಗ್ರಾಮ ಒನ್, ಬಳ್ಳಾರಿ ಒನ್ ಮತ್ತು ಸೇವಾ ಕೇಂದ್ರಗಳಲ್ಲಿ ಆನ್‌ಲೈನ್ (https://sevasindhu.karnataka.gov.in/Sevasindhu/Department Services Kannada) ಮೂಲಕ ಅರ್ಜಿ ಸಲ್ಲಿಸಿ, ಸ್ವೀಕೃತಿಯೊಂದಿಗೆ ಹಾರ್ಡ್ ಪ್ರತಿಯನ್ನು ಆಯಾ ತಾಲ್ಲೂಕಿನ ತಾಲ್ಲೂಕು ಪಂಚಾಯಿತಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ವಿವಿದ್ದೋದ್ದೇಶ ಪುನರ್ವಸತಿ ಕಾರ್ಯಕರ್ತ (ಎಂ.ಆರ್.ಡಬ್ಲ್ಯೂ)ರಿಗೆ ಆಗಸ್ಟ್ 31 ರೊಳಗಾಗಿ ಸಲ್ಲಿಸಬೇಕು.

ವಿವಿಧ ಯೋಜನೆಗಳಿಗೆ ಅರ್ಜಿ ಸಲ್ಲಿಸಬಯಸುವ ಫಲಾನುಭವಿಗಳಿಗೆ ಸೇವಾಸಿಂಧು ಡಿ.ಬಿ.ಟಿ (ನೇರ ನಗದು ವರ್ಗಾವಣೆ) ಮೂಲಕ ಆನ್‌ಲೈನ್ ವೇದಿಕೆ ತಂತ್ರಾಂಶದಡಿ ಅಳವಡಿಸಲಾಗಿರುತ್ತದೆ

ಹೆಚ್ಚಿನ ಮಾಹಿತಿಗಾಗಿ ವಿವಿದ್ದೋದ್ದೇಶ ಪುನರ್ವಸತಿ ಕಾರ್ಯಕರ್ತರು: ಬಳ್ಳಾರಿ–8880875620, ಕುರುಗೋಡು–9538000887, ಸಿರುಗುಪ್ಪ–9743509698, ಸಂಡೂರು–9632052270 ಅಥವಾ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಕಚೇರಿಯ ದೂ.08392–267886 ಗೆ ಸಂಪರ್ಕಿಸಿ.

# ರಾಷ್ಟ್ರ ಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿಗೆ ಅರ್ಜಿ ಆಹ್ವಾನ

■ ಹಂಪಿ ಟೈಮ್ಸ್ ಬಳ್ಳಾರಿ

ಪ್ರಸ್ತಕ ಸಾಲಿಗೆ ರಾಷ್ಟ್ರ ಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿಗೆ ಅರ್ಹ ಶಿಕ್ಷಕರಿಂದ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಶಾಲಾ ಶಿಕ್ಷಣ ಮತ್ತು ವಿದ್ಯಾರ್ಥಿಗಳ ಶ್ರೇಯೋಭಿವೃದ್ಧಿಗಾಗಿ ದೇಶದಾದ್ಯಂತ ಶಿಕ್ಷಕರು ನೀಡಿರುವ ಅನನ್ಯ ಸೇವೆಯನ್ನು ಸ್ಮರಿಸಿ, ಅಂತಹ ಶಿಕ್ಷಕರಿಗೆ ನೀಡಲಾಗುವ ಪ್ರಶಸ್ತಿಗೆ ಜಿಲ್ಲೆಯ ಅರ್ಹ ಶಿಕ್ಷಕರು, ಮುಖ್ಯ ಶಿಕ್ಷಕರು ವೆಬ್‌ಸೈಟ್ ಕೊಂಡಿ http://nationalawardstoteachers.education.gov.in ಗೆ ಭೇಟಿ ನೀಡಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು.

ಪ್ರತಿ ತಾಲ್ಲೂಕಿನಿಂದ ಕನಿಷ್ಠ 25 ರಿಂದ 30 ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದಾಗಿದ್ದು, ಅರ್ಜಿ ಸಲ್ಲಿಸಲು ಜುಲೈ 31 ಕೊನೆಯ ದಿನವಾಗಿದೆ.

ಹೆಚ್ಚಿನ ಮಾಹಿತಿಗಾಗಿ ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕರ ಕಚೇರಿಗೆ ಸಂಪರ್ಕಿಸಬಹುದು ಎಂದು ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕರಾದ ಬಿ.ಉಮಾದೇವಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಶಟಲ್ ಬ್ಯಾಡ್ಮಿಂಟನ್ ಪಂದ್ಯಾವಳಿ ಹೆಸರು ನೋಂದಾಯಿಸಿ

■ ಹಂಪಿ ಟೈಮ್ಸ್ ಕೊಪ್ಪಳ

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಕೊಪ್ಪಳ ಹಾಗೂ ಫ್ರೆಂಡ್ಸ್ ಮೀಟ್ ಬ್ಯಾಡ್ಮಿಂಟನ್ ಗ್ರೂಪ್‌ರವರ ಸಂಯುಕ್ತಾಶ್ರಯದಲ್ಲಿ ಕೊಪ್ಪಳ ಜಿಲ್ಲಾ ಕ್ರೀಡಾಂಗಣದಲ್ಲಿ ಜುಲೈ 13 ಮತ್ತು ಜು.14ರಂದು ರಾಜ್ಯ ಮಟ್ಟದ ಮುಕ್ತ ಶಟಲ್‌ಬ್ಯಾಡ್ಮಿಂಟನ್(ಡಬಲ್ಸ್) ಪಂದ್ಯಾವಳಿಯನ್ನು ಆಯೋಜಿಸಲಾಗಿದ್ದು, ಭಾಗವಹಿಸಲಿಚ್ಛಿಸುವ ಆಸಕ್ತರು ತಮ್ಮ ಹೆಸರನ್ನು ನೋಂದಾಯಿಸಬೇಕು.

ಈ ಕ್ರೀಡಾಕೂಟದಲ್ಲಿ ಭಾಗವಹಿಸುವ ಕ್ರೀಡಾಪಟುಗಳು ಮೊದಲಿಗೆ ಪ್ರವೇಶ ಶುಲ್ಕ ರೂ. 1000 ಗಳನ್ನು ಭರಿಸಬೇಕು. ಕ್ರೀಡೆಯ ದಿನದಂದು ಹೆಸರನ್ನು ನೋಂದಾಯಿಸಲು ಅವಕಾಶವಿರುವುದಿಲ್ಲ. ಕ್ರೀಡಾಪಟುಗಳು ಜುಲೈ 11 ರೊಳಗೆ ತಮ್ಮ ಹೆಸರನ್ನು ನೋಂದಾಯಿಬೇಕು. ಭಾಗವಹಿಸುವ ಕ್ರೀಡಾಪಟುಗಳು ಆಧಾರ ಕಾರ್ಡ್ ಕಡ್ಡಾಯವಾಗಿ ತರಬೇಕು. ಕ್ರೀಡಾಪಟುಗಳಿಗೆ ಟಿಫನ್ ಮತ್ತು ಊಟದ ವ್ಯವಸ್ಥೆ ಇರುತ್ತದೆ.

ಹೆಚ್ಚಿನ ಮಾಹಿತಿಗಾಗಿ ಸುರೇಶ ಮೊ.ಸಂ: 8660114164, ಅರುಣ ಮೊ.ಸಂ: 8951665355, ಹರೀಶ ಮೊ.ಸಂ: 8088302741, ಸುಶೀಲ್ ಕುಮಾರ ಮೊ.ಸಂ: 8884247730 ಇವರಿಗೆ ಸಂಪರ್ಕಿಸುವಂತೆ ಕೊಪ್ಪಳ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕರು ತಿಳಿಸಿದ್ದಾರೆ.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA